




**if not delivered please return to :**

ವಿಳಾಸ :
ನೂಪುರ ಭ್ರಮರಿ,
'ಸಾನ್ನಿಧ್ಯ' ಪ್ರಕಾಶನ,
ದೇಚೂರು ರಸ್ತೆ,
ಅಶ್ವತ್ಥಕಟ್ಟೆ ಸಮೀಪ,
ಮಡಿಕೇರಿ, ಕೊಡಗು – 571201

ಫೋನ್ ನಂ : 9964140927

ವೆಬ್‌ಸೈಟ್ :
www.noopurabhramari.com

ಇ–ಮೈಲ್ ವಿಳಾಸ :
feedback@noopurabhramari.com
editor@noopurabhramari.com


# ನೂಪುರ ಭ್ರಮರಿ

... ನರ್ತನ ಜಗತ್ತಿಗೊಂದು ಪರಿಭ್ರಮಣ



(ಖಾಸಗಿ ಪ್ರಸಾರಕ್ಕಾಗಿ)
ಪುಷ್ಯ–ಮಾರ್ಗಶಿರ
ಸಂಪುಟ ೨ ಸಂಚಿಕೆ ೬

# ನೂಪುರ ಭ್ರಮರಿ

...ನರ್ತನ ಜಗತ್ತಿನೊಂದು ಪರಿಭ್ರಮಣ

## ಹೇಮಂತ ಋತು ಗಾನ

ಸಂಪಾದಕರು : ಮನೋರಮಾ ಬಿ. ಎನ್.
ವೆಬ್‌ಸೈಟ್ ವಿನ್ಯಾಸ : ಮಹೇಶ್ ಎಳ್ಯಡ್ಕ, ಧ್ಯೇಯ ಟೆಕ್ನಾಲಜೀಸ್, ಬೆಂಗಳೂರು.
ವಿತರಣಾ ಮುಖ್ಯಸ್ಥ :ವಿಷ್ಣುಪ್ರಸಾದ್ ನಿಡ್ಡಾಜೆ
ಸಂಪಾದಕ ಮಂಡಳಿ : ಶ್ರೀಲಕ್ಷ್ಮಿ ಎಂ.
ರಾಮಚಂದ್ರ ಹೆಗಡೆ ಸಿ.ಎಸ್.
ಕಛೇರಿ ನಿರ್ವಹಣೆ : ರಾಜ್‌ಗೋಪಾಲ್ ಬಿ.ಎನ್
ಪ್ರಕಾಶನ : 'ಸಾನಿಧ್ಯ', ಮಡಿಕೇರಿ
ಮುಖಪುಟ ವಿನ್ಯಾಸ : ಸುನಿಲ್ ಕುಲಕರ್ಣಿ
ಮುದ್ರಣ : ಅಕ್ಷರೋದ್ಯಮ, ಮಂಗಳೂರು

## ಈ ಸಂಚಿಕೆಯಲ್ಲಿ...

ಮಂಜೀರ–
ಅಕ್ಷರ ಭ್ರಮರಿ– ಯಕ್ಷೋಪಾಸನೆ
ಹಸ್ತ ಮಯೂರಿ– ಕಟಕಾಮುಖ
ಲಲಿತ ಲಹರಿ– ಅಗಸರ ನೃತ್ಯ, ಸೃಷ್ಟಿ
ದರ್ಪಣ– ಅರುಂಡೇಲ್
ದೀವಟಿಗೆ–ಯಕ್ಷೋತ್ಸವ, ಬಾರಿಸು ಕನ್ನಡ ಡಿಂಡಿಮವಾ, ನುಡಿಸಿರಿ...
ಅಂಗಳದ ಮಾತು ತಿಂಗಳ ಚರ್ಚೆ
ಮತ್ತು ನಿಮ್ಮ ಬರೆಹ ನಮ್ಮ ಓದು

## ನಮ್ಮ ಬಳಗದ ಮತ್ತಷ್ಟು ಮಂದಿ...

ಗುರು ಮುರಳೀಧರ ರಾವ್, ಮಂಗಳೂರು.(ಮಾರ್ಗದರ್ಶನ)
ಗುರು ವಿದುಷಿ ಬಿ. ಕೆ. ವಸಂತಲಕ್ಷ್ಮಿ, ವಿಶ್ರುತ, ಬೆಂಗಳೂರು, (ಮಾರ್ಗದರ್ಶನ)
ಡಾ । ಎಂ. ಮನೋಹರ್ ಪಾಟ್ಕರ್, ವೈದ್ಯರು, ಮಡಿಕೇರಿ
ಮಹೇಶ್ ಪ್ರಭು, ಸಂಪಾದಕರು, ದಿ ಫ್ಲೋಕ್ಸ್ ನಿಯತಕಾಲಿಕೆ, ಉಡುಪಿ
ರಾಜ್‌ಕುಮಾರ್, ಸಮಾಜ ಸೇವಕರ ಸಮಿತಿ, ಬೆಂಗಳೂರು
ಕಾರ್ತಿಕ್ ಪರಾಡ್ಕರ್, ಎಲೆಕ್ಟ್ರಾನಿಕ್ ಮೀಡಿಯಾ ಎಂಎಸ್ಸಿ. ಬೆಂಗಳೂರು
ಸಂಜಯ್ ಭಟ್ ಬೆಣ್ಣೆ ಮತ್ತು ಎನ್. ವಿ. ವೈದ್ಯ , ಪತ್ರಕರ್ತರು, ಶಿರಸಿ
ವೆಂಕಟೇಶ್ ಪೈ, ಉಪನ್ಯಾಸಕರು, ಮುಂಬೈ
ಸುಗುಣಾ ಕಮಲಾಕ್ಷ ಕಾಮತ್, ಮುಂಬೈ
ಗೀತಾ ಕೊಂಕೋಡಿ, ಬಂಟ್ವಾಳ, ದ.ಕ.

( ಮುಂದಿನ ಸಂಚಿಕೆಯಲ್ಲಿ ಬಹಳಷ್ಟು ಮಂದಿಯೊಂದಿಗೆ ಭೇಟಿ)



# ಮಂಜೀರ

ಇತ್ತೀಚೆಗೆ ಮತ್ತೊಮ್ಮೆ ಕಾರ್ಯಕ್ರಮವೊಂದರಲ್ಲಿ ಈ ಮಾತುಗಳು ಪ್ರತಿಧ್ವನಿಸಿದವು. 'ಮದುವೆಯಾದ ನಂತರ ಸ್ತ್ರೀಯರು ನೃತ್ಯ ಮಾಡುವುದು, ಪ್ರದರ್ಶನ ನೀಡುವುದು ಅಷ್ಟು ಸಮಂಜಸವಲ್ಲ ಎಂಬ ಮನಸ್ಸು ಇಂದಿಗೂ ಇದೆ. ಬೇಕಾದರೆ ಗುರುವಾಗಿ ಮುಂದುವರಿಯಬಹುದೇನೋ ! ಒಂದು ವೇಳೆ ಪ್ರದರ್ಶನ ಕೊಟ್ಟರೂ ಕೂಡಾ, ' ಅವಳಾ ! ಕುಣೀತಾಳೆ, ಕೊಣಿಪ್ಪೆ( ಪ್ರಾದೇಶಿಕ ಶಬ್ದ) ಎಂಬ ಬಿರುದಾವಳಿ !' ಮನಸ್ಸು ಯಾಕೋ ಚುಳ್ಳೆನಿಸಿತು...

ಅಲಿಖಿತ ಸಂಪ್ರದಾಯಗಳು ಎಷ್ಟೋ ಪ್ರತಿಭಾವಂತ ಕಲಾವಿದರನ್ನು ಮನಸ್ಸಿನಲ್ಲೇ ಕೊರಗುವಂತೆ ಮಾಡುತ್ತಿರುವುದು ಹೌದು. ಹಾಗಾಗಿ ರಂಗಕ್ಕೆ ಬರುವ ಕಲಾವಿದರಿಗಿಂತಲೂ ಪ್ರತಿಭೆ ಇದ್ದರೂ ತೆರೆಮರೆಯಲ್ಲೇ ಸರಿದು ಒಂದು ಕಾಲಕ್ಕೆ 'ನಾನೂ ಹಿಂದೊಮ್ಮೆ ಡ್ಯಾನ್ಸ್ ಕಲಿತಿದ್ದೆ' ಎಂದು ಹೇಳುವವರ ಸಂಖ್ಯೆಯೇ ಅಧಿಕ. ವಿದ್ಯಾಭ್ಯಾಸ– ಎಸ್‌ಎಸ್‌ಎಲ್‌ಸಿ– ಪಿಯುಸಿ ಪರೀಕ್ಷೆಗಳ ನೆಪವೊಡ್ಡಿಯೋ, 'ಅಷ್ಟು ಬೆಲೆ ಬಾಳುವ ಕಲೆ ನಮ್ಮಂತವರಿಗಲ್ಲ. ನಮ್ಮಿಂದ ಸುಧಾರಿಸಲಿಕ್ಕಾಗಲಿಕಿಲ್ಲ' ಎಂಬ ಅಸಹಾಯಕತೆಯನ್ನು ಮುಂದುಮಾಡಿಯೋ, 'ವಯಸ್ಸಾಯಿತು. ನೋಡಿವರು ಏನೆಂದಾರು? ಅಷ್ಟಕ್ಕೂ ಮಧ್ಯ ವಯಸ್ಸು ಕಳೀತು ಅಂದರೆ ಡ್ಯಾನ್ಸ್ ಮಾಡ್ಲಿಕಾಗುತ್ತಾ ! ಮುಖ ನೆರಿಗೆ ಕಟ್ಟಿ, ಸೊಂಟದ ಸುತ್ತ ಟಯರ್ ಬಂದ ಮೇಲೆ ಮಾಡಲಿಕ್ಕಾದ್ರೂಮ್ಮೆ ತಿರುಗಬೇಕೇ ! ಮಾಡಿದ್ರೂ ಮುದುಕಿಯರ ಡ್ಯಾನ್ಸ್ ನೋಡೋರ್ಯಾರು' ಎಂಬ ಅಸಡ್ಡೆಯಿಂದಲೋ ಹರೆಯ, ವಯಸ್ಸಿನ ಕಾರಣವೊಡ್ಡಿ ಹೆಣ್ಣು ಮಕ್ಕಳನ್ನು ಹಿಂದಕ್ಕೆಳೆಸುವ ಪ್ರವೃತ್ತಿ ಇಂದಿಗೂ ಬೇರೂರಿದೆ. ಎಷ್ಟೋ ಬಾರಿ ರಂಗಪ್ರವೇಶ ಮಾಡಿ ಶಹಬ್ಬಾಸ್ ಅನ್ನಿಸಿಕೊಂಡವರೂ, ನೃತ್ಯದಲ್ಲಿ ಡಿಗ್ರಿ ಪಡೆದವರೂ, ಉತ್ತಮ ಅಭಿವ್ಯಕ್ತಿವುಳ್ಳವರೂ ಸಮಾಜ–ಕುಟುಂಬಗಳಲ್ಲಿನ ಕಿರಿಕಿರಿಗಳಿಂದಾಗಿ ಬತ್ತಿ ಹೋಗುತ್ತಿದ್ದಾರೆ.

ಹೀಗಾಗಿ ನಮ್ಮ ಕಣ್ಣ ಮುಂದೆಯೇ ನೃತ್ಯವನ್ನು ಒಂದಲ್ಲ ಒಂದು ರೀತಿಯಲ್ಲಿ ಇಂದಿಗೂ ಕಾಡುತ್ತಿರುವ ಒಂದಷ್ಟು ಮರೆಯಲ್ಲಿರುವ ಅಸ್ಪೃಶ್ಯತೆಗೆ ಎಷ್ಟೋ ಹೆಣ್ಣು ಮಕ್ಕಳು ಪ್ರತಿಭೆಯಿದ್ದರೂ ಸೊರಗುತ್ತಿದ್ದಾರೆ. ಕೊನೆಗೆ, ಅಪರೂಪಕ್ಕೊಂಬಂತೆ ಸ್ತ್ರೀಯರು ಗುರುಗಳಾಗಿ ಮಾತ್ರ ಉಳಿದುಕೊಳ್ಳುತ್ತಾ, ಅವರಲ್ಲಿರುವ ಕಲಾವಿದರ ಅಭಿವ್ಯಕ್ತಿಗೆ ಪುಷ್ಟಿ ದೊರೆಯದಿರುವುದು ಕಲೆಯ ದೃಷ್ಟಿಯಿಂದ ಹಿಮ್ಮುಖ ಬೆಳವಣಿಗೆಯೇ ಹೌದು. ಆದರೆ ಇದರ ಬಿಸಿ ಮೇಲ್ಮಧ್ಯಮ ವರ್ಗ ಮತ್ತು ಅದರಾಚೆಗಿನ ಶ್ರೀಮಂತ ವರ್ಗವನ್ನು ಅಷ್ಟಾಗಿ ಕಾಡುತ್ತಿಲ್ಲ.

ಈ ಪ್ರವೃತ್ತಿ ಗಂಡು ಮಕ್ಕಳನ್ನು ಬಿಟ್ಟಿಲ್ಲ. ಪಾಶ್ಚಿಮಾತ್ಯ ಸಂಸ್ಕೃತಿಯ ನೃತ್ಯವಾದರೆ ಸರಿ, ಇಲ್ಲವೇ ಅಷ್ಟಾಗಿ ಹೆಸರಿಗೆ ಬಾರದೆ ಶಾಸ್ತ್ರೀಯ ನೃತ್ಯಪಟುಗಳಾಗಿ

ನೃತ್ಯವಾದರೆ ಸರಿ, ಇಲ್ಲವೇ ಅಷ್ಟಾಗಿ ಹೆಸರಿಗೆ ಬಾರದೆ ಶಾಸ್ತ್ರೀಯ ನೃತ್ಯಪಟುಗಳಾಗಿ ಚಾಲ್ತಿಯಲ್ಲಿದ್ದರೆ, ಲೇವಡಿ ಮಾಡುವವರ ಗುಂಪೇ ಹೆಚ್ಚಿದೆ. ನೃತ್ಯದ ಪ್ರಧಾನ ಅಂಗವಾದ ಲಾಸ್ಯಕ್ಕೆ ಮೈಯನ್ನು ಒಗ್ಗಿಸುವಾಗ ಕುಚೇಷ್ಟೆಯ ನಗು ಬೀರುವವರಿಗೇನೂ ಕಡಿಮೆಯಿಲ್ಲ. ಅಷ್ಟೇ ಅಲ್ಲದೆ ಕಲಾವಿದರ ವೈಯಕ್ತಿಕ ಜೀವನವನ್ನೂ ಕೆದಕಿ ರಾಡಿ ಮಾಡುವ, ಮಾತಾಡುವ ಪ್ರವೃತ್ತಿಯಿಂದಾಗಿ ಬೇಸತ್ತವರು ಒಂದಡೆಯಾದರೆ, ಅಗತ್ಯ ಪ್ರೋತ್ಸಾಹ ಸಿಗದೇ ನೊಂದು, ತಮಗಾಗದೆಂದು ಹಿಂದೆ ಸರಿದುಹೋದವರು ಸಾಕಷ್ಟು ಮಂದಿ.

ಈ ಮನೋಭಾವ, ಕರ್ನಾಟಕದ ಕಲೆ ಯಕ್ಷಗಾನವನ್ನೂ ಗಾಢವಾಗಿ ತಟ್ಟಿದೆ. ಇದರಿಂದಾಗಿ ಭವಿಷ್ಯದ ದಿನಗಳಲ್ಲಿ ಭರವಸೆಯ ಕಲಾವಿದರು ಬೆಳೆಯುವುದು ಅಪರೂಪವಾಗಬಹುದೆಂಬ ಶಂಕೆ ಹಿರಿಯ ಕಲಾವಿದರನ್ನು ಕಾಡದೇ ಬಿಟ್ಟಿಲ್ಲ. ಈಗಾಗಲೇ ಹವ್ಯಾಸಿಗಳಾಗುತ್ತಾ ಹೊಗುವ ಕಲಾವಿದರನ್ನು ಮತ್ತು ಸ್ತ್ರೀಯರು ಯಕ್ಷಗಾನವನ್ನು ಕಲಿತರೂ ಹಲವು ಮನಸ್ಥಿತಿ, ಕಾಲ ಅಭಿಪ್ರಾಯದಿಂದಾಗಿ ಮುಂದುವರಿಯಲು ಸಾಧ್ಯವಾಗದಿರುವುದನ್ನು ನೋಡಿದಾಗ, ಮುಂದೊಮ್ಮೆ ಯಕ್ಷಗಾನ ಮೇಳಗಳ ತಿರುಗಾಟದ ಸಹಿತ ಕಲೆಯು ಕೇವಲ ಗ್ರಂಥಗಳಲ್ಲಿ ಇತಿಹಾಸವಾಗಿಯೋ, ಚಿತ್ರಪಟದ ವಸ್ತುವಾಗಿಯೋ ಹೋದರೆ ಆಶ್ಚರ್ಯವಲ್ಲ.

ಇವೆಲ್ಲದನ್ನೂ ಮೀರಿ ನಿಂತು ಶ್ರದ್ಧೆಯಿಂದ ಕಲಿತು ಸಾಧಿಸುವವರು ಬಹಳ ವಿರಳ. ಅದಕ್ಕೆ ಪ್ರತಿಭೆಯೊಂದಷ್ಟೇ ಅಲ್ಲ, ಕಾಲ, ದೇಶ, ಮನಸ್ಸು, ಅನುಕೂಲ, ಸಹಕಾರ, ಕೊನೆಗೆ ಅದೃಷ್ಟ ಕೈ ಹಿಡಿದರೆ ಮಾತ್ರ ಕಲೆ ಒಲಿದೀತು ಎನ್ನುವುದು ಖಂಡಿತವಾಗಿಯೂ ಸತ್ಯ. ಅದರಲ್ಲೂ ನೃತ್ಯ ಕಲಿಕೆ ಮತ್ತು ಸಾಧನೆಯ ಪಾಲಿಗಂತೂ ಇದು ಪಲಾಯನವಾದದ ಮಾತಾಗಲಿಕ್ಕಿಲ್ಲ.

ಕಲೆಯ ಚಲನೆಯಲ್ಲಿ ನೂರೆಂಟು ವಿಘ್ನಗಳು ಬರುವುದು ಸಹಜ. ಆದರೆ ಕಲಾರಾಧನೆಯಲ್ಲಿ ನಿಜಕ್ಕೂ ಅಚಲ ಮನಸ್ಸಿದ್ದರೆ ಕಲೆ ಖಂಡಿತಾ ಕೈ ಬಿಡದು. ಮಾತ್ರವಲ್ಲ, ಇನ್ನಾವುದೇ ಕ್ಷೇತ್ರ ನೀಡದಷ್ಟು ತೃಪ್ತಿ, ಹರಕೆ-ಹಾರೈಕೆ-ಅಭಿಮಾನಗಳನ್ನು ನೀಡುವ ಶಕ್ತಿ ಕಲೆಗೊಂದೇ ಸರಿ ! ಹಾಗಾಗಿಯೇ ಹಿರಿಯರು ಹೇಳುವುದಿದೆ, ' ಕಲೆಗೆ ಎಂದಿದ್ದರೂ ಬೆಲೆಯಿದೆ.' ಏಕೆಂದರೆ ಕಲೆ ವಿಶ್ವ ಭಾಷೆ ! ಮೂಕನನ್ನೂ ಮಾತಾಡಿಸಬಲ್ಲ ವಿಶಿಷ್ಟ ಜಗತ್ತು.

ಎಲ್ಲಾ ಕ್ಷೇತ್ರಗಳಿಗೂ ತನ್ನದೇ ಆದ ವ್ಯಾಪ್ತಿ, ಮಿತಿಗಳಿವೆ. ಆದರೆ ಕಲೆ ಜೀವನದ ಅನಂತ ಸಾಧ್ಯತೆಗಳನ್ನು ತನ್ನಲ್ಲಿ ಒಗ್ಗಿಸಿಕೊಳುತ್ತಾ, ಹಿಗ್ಗಿಸಿಕೊಳ್ಳುತ್ತಾ ಹೋಗುತ್ತಿರುತ್ತದೆ. ಜೀವನದ ಪ್ರತಿಯೊಂದು ಆಯಾಮಕ್ಕೂ ಅದರಲ್ಲಿ ಅಭಿವ್ಯಕ್ತಿಯಿದೆ, ಮಾನ್ಯತೆಯಿದೆ. ಜೀವ ಮತ್ತು ಜೀವನದ ಮೂಲ ಹಾಗೂ ಬೆಳವಣಿಗೆಯಲ್ಲಿ ಅದರ ಕೈವಾಡವಿದೆ. ಜೀವನವನ್ನೇ ಆಧರಿಸಿ ಬೆಳೆದು ಬಂದ ನೆಲೆಯಲ್ಲಿ ಅನನ್ಯತೆಯಿದೆ. ಅದರೊಂದಿಗೇ ಬೆಳೆದು ನಲಿದರೆ ಜೀವನಕ್ಕೊಂದು ಆನಂದವಿದೆ. ಆದ್ದರಿಂದ ಆದಷ್ಟೂ ಪೂರ್ವಾಗ್ರಹಗಳನ್ನು ಬಿಟ್ಟು ನಮ್ಮ ಪುಟ್ಟ ಅಂಗೈಯೊಳಗೆ ಆದಷ್ಟೂ ತುಂಬಿಕೊಳ್ಳೋಣ. ಆಗದೇ ?

**ಪ್ರೀತಿಯಿಂದ,**

**✍ ಸಂಪಾದಕಿ**

manorama@noopurabhramari.com



## ।ಅಂಗಳದ ಮಾತು

## ।ತಿಂಗಳ ಚರ್ಚೆ

ಅಶ್ವಯುಜ-ಕಾರ್ತಿಕ ಮಾಸದ ಸಂಚಿಕೆಯಲ್ಲಿನ ಸಂಪಾದಕೀಯ ಉತ್ತಮವಾಗಿ ಮೂಡಿಬಂದಿದೆ. ಇಂದು ಸಮೂಹ ಮಾಧ್ಯಮಗಳಲ್ಲಿ ಕಲೆಯ ಕುರಿತಾದ ವಿಚಾರಗಳಲ್ಲಿ ಸಿಗಬೇಕಾದ ಪ್ರಾಧಾನ್ಯತೆ ಸಿಗುತ್ತಿಲ್ಲ. ಬಹಳ ಮಂದಿ ಸಂಗೀತ, ಭರತನಾಟ್ಯ, ಯಕ್ಷಗಾನ, ನಾಟಕ, ಚಿತ್ರಕಲೆ, ಕ್ರೀಡೆ ಮೊದಲಾದ ಕಲಾ ಮಾಧ್ಯಮಗಳಲ್ಲಿ ತಮ್ಮ ಪ್ರತಿಭೆಗಳನ್ನು ತೋರುತ್ತಿದ್ದರೂ, ಅವರ ಪ್ರತಿಭೆಯ ವಿಕಾಸಕ್ಕೆ ಪೂರಕವಾಗುವಂತಹ ರೀತಿಯಲ್ಲಿ ವಿಮರ್ಶೆಗಳು ಪ್ರಕಟವಾಗುತ್ತಿಲ್ಲ. ಕಲಾ ಪ್ರತಿಭೆ ಇನ್ನಷ್ಟು ಬೆಳೆಯಲು ಸಹಕಾರಿಯಾಗಬಲ್ಲ ಮಾಹಿತಿಗಳನ್ನು ಪತ್ರಿಕೆಗಳ ಕಲಾ ಪುಟಗಳಲ್ಲಿ ತಜ್ಞರಿಂದ ನೀಡಬಹುದು. ಆದರೂ ಸಾಕಷ್ಟು ಮಾಹಿತಿಗಳು ಪ್ರಕಟಗೊಳ್ಳುತ್ತಿಲ್ಲ. ಅದಕ್ಕೆ ಬದಲಾಗಿ ಸಮಾಜಕ್ಕೆ ಮಾರಕವಾಗಬಲ್ಲಂತಹ, ಕಲೆಗೆ ಅಪಚಾರವಾಗಬಲ್ಲಂತಹ ಅಶ್ಲೀಲ ಚಿತ್ರಗಳು ಪ್ರಕಟವಾಗುತ್ತಿರುವುದು ವಿಷಾದಕರ.

ಓಶೋ ರಜನೀಶ್ ಅವರು ಪತ್ರಿಕೋದ್ಯಮದ ಕುರಿತು ಬರೆದ ಪುಸ್ತಕದಲ್ಲಿ "ಪತ್ರಕರ್ತನಾದವನು ಮುಕ್ತ ಮನಸ್ಸನ್ನು ಹೊಂದಿರಬೇಕು. ನಮ್ಮಲ್ಲಿ ಬಹಳ ಮಂದಿ ಕವಿ, ಕಲಾವಿದ, ಬರಹಗಾರ, ಸಂಗೀತಗಾರ., ಆಧ್ಯಾತ್ಮಿಕ ಗುರುಗಳಿದ್ದಾರೆ. ಪತ್ರಕರ್ತರು ಅವರನ್ನೆಲ್ಲ ಪರಿಚಯಿಸಬೇಕು. ಪತ್ರಿಕೆಗಳಲ್ಲಿ ಬರುವ ವಿಚಾರಗಳಿಂದ ಹಳೆಯ ಪತ್ರಿಕೆಗಳೂ ಕೂಡ ನಮಗೆ ಉಪಯುಕ್ತವಾಗಿರಬೇಕು. ವರದಿಗಳನ್ನು ನೀಡುವಾಗ ರೋಚಕ ವರದಿಗಳಿಗಿಂತಲೂ ಕಲೆ ಸಾಹಿತ್ಯ ಮೊದಲಾದ ಉತ್ತಮ ವಿಚಾರಗಳನ್ನು ಪ್ರೋತ್ಸಾಹಿಸುವಂತಹ, ಸಮಾಜಕ್ಕೆ ಹಿತವೆನಿಸುವ, ಶಿಕ್ಷಣ ನೀಡುವಂತಹ ವರದಿಗಳಿಗೆ ಆದ್ಯತೆ ನೀಡಬೇಕು" ಎಂದಿದ್ದಾರೆ.

ಅದೇ ರೀತಿ ಖ್ಯಾತ ಕಲಾ ವಿಮರ್ಶಕ ಶ್ರೀ ಈಶ್ವರಯ್ಯನವರು, 'ಸಾಂಸ್ಕೃತಿಕ ಕಾರ್ಯಕ್ರಮಗಳ ವಿಮರ್ಶೆಯ ನೆಪದಲ್ಲಿ ಕೇವಲ ತಪ್ಪುಗಳನ್ನು ಮಾತ್ರ ಬೊಟ್ಟು ಮಾಡುವುದು ಸರಿಯಲ್ಲ. ಆ ರೀತಿಯ ದೃಷ್ಟಿಕೊನವಿಟ್ಟುಕೊಂಡಲ್ಲಿ ಟೀಕೆ ಮಾತ್ರ ಕಾಣಿಸುತ್ತದೆ. ಇದರಿಂದ ಕಲೆಯನ್ನು ಆಸ್ವಾದಿಸುವುದು ಸಾಧ್ಯವಿಲ್ಲ. ಆದ್ದರಿಂದ ವಿಮರ್ಶೆಯು ಕಲೆಯನ್ನು ಪ್ರೋತ್ಸಾಹಿಸುವಂತಿರಬೇಕು. ಕಲೆಗೆ ಅಪಚಾರವಾಗಕೂಡದು' ಎಂದಿದ್ದಾರೆ. ಆದ್ದರಿಂದ ಕಲೆ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮಾಧ್ಯಮ ಪ್ರತಿನಿಧಿಗಳು ಎಚ್ಚರ ವಹಿಸುವುದು ಅಗತ್ಯ. ಈ ನಿಟ್ಟಿನಲ್ಲಿ ನಿಮ್ಮ ಮಂಜೀರ (ಸಂಪಾದಕೀಯ) ಅರ್ಥಪೂರ್ಣವಾಗಿದೆ.

**- ನಿಡುವಜೆ ರಾಮ ಭಟ್, ಪ್ರಶಾಂತಿ ನಿಲಯ,**

# ದೀವಟಿಗೆ

## ಸಂಪಾಜೆ ಯಕ್ಷೋತ್ಸವ– ೨೦೦೮

**ದ**ಕ್ಷಿಣ ಕನ್ನಡದ ಸಂಪಾಜೆಯಲ್ಲಿ ಅಕ್ಟೋಬರ್–ನವೆಂಬರ್ ಬಂದಿತೆಂದರೆ ಸಾಕು, ಪ್ರತಿವರ್ಷ ಕಲ್ಲುಗುಂಡಿ ಶಾಲಾ ವಠಾರ ಜಾತ್ರೆಯಂತಾಗುತ್ತದೆ. ಆ ಒಂದು ದಿನದ ಬೆಳಗಿನಿಂದ ಮತ್ತೊಂದು ದಿನದ ಬೆಳಗಿನವರೆಗೆ ಪುಟ್ಟ ಊರಿಗೆ ಊರೇ ಜಾತ್ರೆಯಾಗಿಬಿಡುತ್ತದೆ. ಹಳ್ಳಿ, ನಗರಗಳ ಬೇಧವಿಲ್ಲದೆ ಊರೂರುಗಳಿಂದ ಜನ ತಂಡೋಪತಂಡವಾಗಿ ಬಂದು ರಾತ್ರೆಯಿಡೀ ಕುಳಿತು ಆ ಉತ್ಸವವನ್ನು ಆಸ್ವಾದಿಸುತ್ತಾರೆ. ಅಷ್ಟಕ್ಕೂ ಇದು ಯಾವುದೋ ದೇವರ ಉತ್ಸವವಲ್ಲ. ಬದಲಾಗಿ ಆರಾಧನೆ. ಸುಮಾರು ೧೫ ವರ್ಷಗಳಿಂದಲೂ ಇಂತಹ ಒಂದು ದಿವ್ಯ ಕ್ಷಣಕ್ಕೆ ಹಳ್ಳಿಯೊಂದರ ಶಾಲಾ ವಠಾರದಲ್ಲಿ ವೇದಿಕೆ ಕಲ್ಪಿಸಿಕೊಡುವ ಆ ಕ್ಷಣವೇ ಯಕ್ಷೋತ್ಸವ. ಇದು ತೆಂಕು ಮತ್ತು ಬಡಗು ತಿಟ್ಟುಗಳ ಸಮಸ್ತ ಕಲಾವಿದರ ಕೂಡುವಿಕೆಯಲ್ಲಿ ಕರಾವಳಿಯ ಸುಂದರ ಸಂಸ್ಕೃತಿ ಯಕ್ಷಗಾನದ ಪರಂಪರೆ ಮತ್ತು ನೂತನ ಅಭಿವ್ಯಕ್ತಿಗಳು ಬಹುದೊಡ್ಡ ಪ್ರತಿರೂಪವನ್ನು ತಾಳುವ ಘಟ್ಟ.

ಡಾ। ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನದ ಪ್ರಯತ್ನವಾಗಿ, ಒಂದಿಡೀ ದಿನದ ಅದ್ದೂರಿ ಯಕ್ಷಗಾನ ಬಯಲಾಟವೇ ಯಕ್ಷೋತ್ಸವ. ಸುಮಾರು ೩೦ ಲಕ್ಷಕ್ಕಿಂತಲೂ ಅಧಿಕ ಮೊತ್ತವನ್ನು ಯಕ್ಷಗಾನಕ್ಕೆ ಮೀಸಲಿಟ್ಟು ಪ್ರೋತ್ಸಾಹಿಸುತ್ತಿದೆ ಈ ಪ್ರತಿಷ್ಠಾನ. ಪ್ರತೀ ವರ್ಷ ಯಕ್ಷಗಾನದ ಸಾಧಕರಿಗೆ, ಕಲಾವಿದರಿಗೆ, ಪುರೋಹಿತ ವಿದ್ವನ್ಮಣಿಗಳಿಗೆ ಯಾವ ರಾಷ್ಟ್ರ ಪ್ರಶಸ್ತಿಗಳಿಗೂ ಕಡಿಮೆಯಿಲ್ಲದಂತೆ ಪ್ರಶಸ್ತಿ, ಪುರಸ್ಕಾರವನ್ನಿತ್ತು ಸನ್ಮಾನಿಸಿ ಅಭಿನಂದಿಸುವುದು ಕಲೆಗೆ ಸಂಬಂಧಿಸಿದಂತೆ ಅಭೂತಪೂರ್ವ ಬೆಳವಣಿಗೆಯೇ ಹೌದು. ಅಷ್ಟು ಮಾತ್ರವಲ್ಲ, ಈ ಅಪೂರ್ವ ಕ್ಷಣದಲ್ಲಿ ಸುಮಾರು ೧೫ ಲಕ್ಷಕ್ಕೂ ಮಿಗಿಲು ವಿದ್ಯಾರ್ಥಿ ವೇತನ ಮತ್ತು ಪುರಸ್ಕಾರ ನೀಡುವುದೂ ಮಹತ್ವದ ಸಂಗತಿ.ಇದರಿಂದಾಗಿ ಹಲವು ಸಂಘ–ಸಂಸ್ಥೆಗಳು, ವಿದ್ಯಾರ್ಥಿಗಳು ಸಾಕಷ್ಟು ಪ್ರಯೋಜನ ಹೊಂದಿ ಉತ್ತಮ ಭವಿಷ್ಯ ಕಾಣುತ್ತಿದ್ದಾರೆ.

ಪ್ರತಿವರ್ಷದಂತೆ ಈ ವರ್ಷವೂ ಪ್ರಧಾನ ಶೀರ್ಷಿಕೆಯಡಿ ಪ್ರಸಂಗಗಳನ್ನು ಆಯ್ದುಕೊಳ್ಳಲಾಗಿತ್ತು. ಈ ವರ್ಷದ ಶ್ರೀಕೃಷ್ಣ ಜನ್ಮ, ಪೂತನಿ ಸಂಹಾರ, ಕಾಳಿಂಗ ಮರ್ದನ, ಶ್ರೀಕೃಷ್ಣ ಲೀಲೆ, ಗೋವರ್ಧನ ಉದ್ಧರಣ, ಕಂಸ ವಧೆ, ಗುರುದಕ್ಷಿಣೆ, ಭೌಮಾಸುರ ವಧೆ, ವೀರವರ್ಮ ಕಾಳಗ ಮುಂತಾದ ೮ ಪ್ರಸಂಗಗಳು 'ಲೀಲಾಮೂರ್ತಿ ಶ್ರೀಕೃಷ್ಣ'ನದ್ದು. ಅಕ್ಟೋಬರ್ ೨೬ ರಂದು ಆಯೋಜಿಸಲಾಗಿದ್ದ ಯಕ್ಷರಂಗದ ಕಲಾವಿದರ ಅಪೂರ್ವ ಕೂಡುವಿಕೆ ಮತ್ತು ಪ್ರದರ್ಶನ ಕಲಾಸಕ್ತರಿಗೆ ರಸದೌತಣ.



ಈ ಬಾರಿ ಚಿಟ್ಟಾಣಿ ರಾಮಚಂದ್ರ ಹೆಗಡೆಯವರಿಗೆ ಶೇಣಿ ಪ್ರಶಸ್ತಿ, ವೇದಮೂರ್ತಿ ಕುಂಞಿತ್ತು ಶಿವರಾಮ ಭಟ್ಟರಿಗೆ, ಕಲಾವಿದರಾದ ಪುತ್ತೂರು ಶ್ರೀಧರ ಭಂಡಾರಿ, ವಿಟ್ಲ ಶಂಭು ಶರ್ಮ, ನೂತನವಾಗಿ ಆರಂಭಿಸಲಾದ ಯಕ್ಷಗಾನ ಅಕಾಡೆಮಿಯ ಪ್ರಥಮ ಅಧ್ಯಕ್ಷ ಕುಂಬ್ಳೆ ಸುಂದರ್ ರಾವ್ ಅವರಿಗೆ ಸನ್ಮಾನ ಅಭಿನಂದನೆ. ಜೊತೆಗೆ ಪ್ರತಿಷ್ಠಾನದ ಪ್ರಥಮ ಕೃತಿಯಾಗಿ ಮೇರು ಕಲಾವಿದ ಕೆ. ಗೋವಿಂದ ಭಟ್ಟರ ಆತ್ಮಕಥನ 'ಯಕ್ಷೋಪಾಸನೆ' ಕೃತಿಯ ಅನಾವರಣ ಡಾ। ಡಿ. ವೀರೇಂದ್ರ ಹೆಗ್ಗಡೆ ಅವರಿಂದ. ಇಂತಹ ಕಲಾ ಪೋಷಕರ ಪ್ರೋತ್ಸಾಹ ಕಲಾವಿದರಿಗೆ ನಿರಂತರವಿರಲಿ.

**ಅಲ್ಲಿ ಅರಳಿದ ಕೆಲವು ಅಭಿಪ್ರಾಯಗಳು...**

**ಜಾ**ನಪದಕ್ಕೆ ಶಾಸ್ತ್ರೀಯಕ್ಕಿಂತಲೂ ಹೆಚ್ಚಿನ ಆಕರ್ಷಣೆ ಇದೆ. ಆದ್ದರಿಂದಲೇ ಯಕ್ಷಗಾನದಂತಹ ಕಲೆಗಳನ್ನು ದಿನವಿಡೀ ಪ್ರೇಕ್ಷಕರು ಕುಳಿತು, ನಿದ್ದೆಗೆಟ್ಟು ನೋಡುತ್ತಾರೆ.

**–ಡಾ। ಡಿ. ವೀರೇಂದ್ರ ಹೆಗ್ಗಡೆ.**

**ಮಂ**ಗಳೂರು ವಿಶ್ವವಿದ್ಯಾನಿಲಯದಲ್ಲಿ ಬಿ.ಎ ವ್ಯಾಸಂಗಕ್ಕೆ ಕನ್ನಡ, ಯಕ್ಷಗಾನ, ಭೂತಾರಾಧನೆಯನ್ನು ಐಚ್ಛಿಕ ವಿಷಯವನ್ನಾಗಿ ಮಾಡಿದರೆ ನಮ್ಮ ನಾಡಿನ ಸಂಸ್ಕೃತಿಯ ಬಗ್ಗೆ ಯುವಕರಲ್ಲಿ ಆಸಕ್ತಿ, ಸಂಶೋಧನೆ ಬೆಳೆದೀತು.

**–ಕೆ. ಗೋವಿಂದ ಭಟ್ಟರು, ಯಕ್ಷಗಾನದ ಹಿರಿಯ ಕಲಾವಿದ.**

**ಗ**ಣೇಶೋತ್ಸವದಲ್ಲಿ ಒಮ್ಮೆ ಬೆಲ್ಲದ ಗಣಪತಿಯನ್ನು ಕೂರಿಸಿದ್ದರಂತೆ. ಕೊನೆಯ ದಿನ ಪ್ರಸಾದ ಕೊಡುವ ಹೊತ್ತಿಗೆ ಪ್ರಸಾದ ಖಾಲಿಯಾಯ್ತು. ಏನು ಮಾಡೋಣ, ಬೆಲ್ಲದ ಗಣಪತಿಯ ಬೆಲ್ಲವನ್ನೇ ಪ್ರಸಾದವಾಗಿ ಕೊಡಲು ಪ್ರಾರಂಭಿಸಿದರಂತೆ ! ಕೊನೆಗೆ ಗಣಪತಿ ಬಿಡುವ ಹೊತ್ತಿಗೆ ಗಣಪತಿ ಕಾಣೆ ? ಕಾರಣ, ಆತ ಇದ್ದದ್ದು ತಿಂದವರ ಹೊಟ್ಟೆಯಲ್ಲಿ! ಅದೇ ರೀತಿ ಅಕಾಡೆಮಿಗಳೂ ಕೂಡಾ ! ನಿರ್ವಹಿಸುವುದು ಸವಾಲಿನ ಕೆಲಸ.

**– ಕುಂಬ್ಳೆ ಸುಂದರ್ ರಾವ್, ಯಕ್ಷಗಾನ ಅಕಾಡೆಮಿ ಅಧ್ಯಕ್ಷರು.**

**ದೊ**ಡ್ಡ ಮೀನುಗಳು ಸಣ್ಣ ಮೀನುಗಳನ್ನು ತಿಂದು ಬದುಕುತ್ತವೆ. ಅದೇ ಪರಿಸ್ಥಿತಿ ಕಲೆಯಲ್ಲೂ ಮುಂದುವರೆದಿದೆ.

**–ವಿಟ್ಲ ಶಂಭು ಶರ್ಮ, ಹಿರಿಯ ಅರ್ಥಧಾರಿ.**

**–ವರದಿ : ವೇದ ಮೂರ್ತಿ ಬಿ. ಜಿ. ನಾರಾಯಣ ಭಟ್**

**(ಲೇಖಕರು ಮಡಿಕೇರಿಯಲ್ಲಿ ಪುರೋಹಿತರು, ಕಲಾವಿದರು,ಕಲಾಪೋಷಕರು)**

✲ ✲

# ದೀವಟಿಗೆ

## ಬಾರಿಸು ಕನ್ನಡ ಡಿಂಡಿಮವಾ...

**ಇಂ**ದು ಜನಮಾನಸದಲ್ಲಿ ಹುಚ್ಚೆಬ್ಬಿಸಿ; ತನ್ನ ಕಬಂಧ ಬಾಹುಗಳೊಳಗೆ ಸೆಳೆದುಕೊಳ್ಳುತ್ತಿರುವ ಥಳುಕು ಬಳುಕಿನ; ಕಣ್ಮನ ಕೋರೈಸುವ, ಅದ್ದೂರಿ ಸೆಟ್ಟಿಂಗ್‌ಗಳ ರಿಯಾಲಿಟಿ ಶೋಗಳ ಭರಾಟೆಯಲ್ಲಿ; ಸಂಗೀತವೆಂದರೆ ಮೈಕೈ ಕುಲುಕಾಡಿಸುತ್ತಾ ಕಿರುಚುವ ಫಿಲ್ಮೀ ಗೀತೆಗಳು ಎಂಬ ಸಾಮ್ರಾಜ್ಯದಲ್ಲಿ, ಕನ್ನಡದ ಕವಿಗಳ ಭಾವಪೂರ್ಣ ಭಾವಗೀತೆಗಳು ಅದೆಲ್ಲಿಯೋ ಕ್ಷೀಣವಾಗುತ್ತಿದೆಯೇನೋ.., ಎನಿಸಿ ಗಾಬರಿಯಾಗುತ್ತಿದೆ, ಆತಂಕ ಕಾಡುತ್ತದೆ.

ಇಂತಹ ಪ್ರವಾಹದ ವಿರುದ್ಧ ಈಜುವಿಕೆಯೆಂಬಂತೆ ದಕ್ಷಿಣ ಕನ್ನಡದ ಪುತ್ತೂರಿನ ಸಾಂಸ್ಕೃತಿಕ ಕಲಾಕೇಂದ್ರ– ಬೊಳುವಾರು ಸಂಘವು ಕೇವಲ ಕನ್ನಡ ಕವಿಗಳ ಭಾವಗೀತೆಗಳನ್ನೇ ಹಾಡುವುದರಿಂದಾಗಿ ಅಭೂತಪೂರ್ವವಾದ ಜನಮನ್ನಣೆ, ವಿಶ್ವಾಸ ಗಳಿಸಿಕೊಂಡಿದೆ; ಅದು ಕೂಡಾ ಸುಮಾರು ೮–೧೬ ವರ್ಷ ವಯಸ್ಸಿನ ಮಕ್ಕಳ 'ಬಾರಿಸು ಕನ್ನಡ ಡಿಂಡಿಮವಾ' ಎಂಬ ಈ ಕಾರ್ಯಕ್ರಮವು ಅದ್ಭುತ ಯಶಸ್ಸಿನೊಂದಿಗೆ ದಾಪುಗಾಲು ಹಾಕುತ್ತಿದೆ.

ಹಿನ್ನಲೆ ವಾದ್ಯಗಳ ಸಹಿತ ಹಾಡುವ ಮಕ್ಕಳ ಈ ಕಾರ್ಯಕ್ರಮದಲ್ಲಿ ಇನ್ನೂ ಅನೇಕ ವಿಶೇಷತೆಗಳಿವೆ. ಮುಖ್ಯವಾಗಿ ಇದೊಂದು ಸ್ಪರ್ಧೆಯಲ್ಲ; ಮುಕ್ತವಾದ ವೇದಿಕೆ. ಇಲ್ಲಿ ಯಾವುದೇ ಹಣ ಸಂದಾಯ; ಫೀಸಿನ ಕಂಡೀಷನ್ ಇಲ್ಲ. ಏನಿದ್ದರೂ ಮಕ್ಕಳಿಗೇ ಸಲುವಳಿಯಾಗುತ್ತದೆ. ಅದರಲ್ಲೂ ಇದರಲ್ಲಿ ಭಾಗವಹಿಸುವ ಅಂದಾಜು ೩೦ ರಷ್ಟು ಮಕ್ಕಳೆಲ್ಲರೂ ಅತ್ಯಂತ ಗ್ರಾಮೀಣ ಪ್ರದೇಶದ; ಎಲೆ ಮರೆಯ ಕಾಯಿಗಳಂತಿರುವ ಪ್ರತಿಭೆಗಳು. ಅವಕಾಶಕ್ಕನುಗುಣವಾಗಿ ಹಾಡುಗಳನ್ನು ನಿರ್ಭಿಡೆಯಾಗಿ ಹಾಡುವ ಮಕ್ಕಳು ಅತ್ಯಂತ ಉತ್ಸಾಹ –ಲವಲವಿಕೆಯ ಬುಗ್ಗೆಯಾಗಿರುತ್ತಾರೆ.; ಸ್ಪರ್ಧೆ–ಬಹುಮಾನ–ಪ್ರಶಸ್ತಿಗಳ ಒತ್ತಡ, ಆತಂಕ, ಗೊಂದಲ, ಭಯಗಳ ಪೂರ್ವಾಗ್ರಹವಿಲ್ಲದೆ ತಮ್ಮ ಮುದ್ದು ಮುಗ್ಧ ಹಾವಭಾವಗಳಿಂದ ನಾವೆಂದೋ ಕೇಳಿ ತಣಿದ, ಮರೆಯುತ್ತಿರುವ, ಮರೆಯಾಗುವ ಹಾಡುಗಳನ್ನು ಹಾಡಿ ನಮ್ಮ ಕಣ್ಣು ಮನಸ್ಸುಗಳಿಗೆ ಸೊಂಪು–ಕಂಪಿನ ರಸದೌತಣ ನೀಡುತ್ತಾರೆ ! ಈ ಬಳಗದ ವಿಶೇಷ ಅಭಿನಂದನಾ ಸಮಾರಂಭವು ಪುತ್ತೂರಿನ ಪುರಭವನದಲ್ಲಿ ನವೆಂಬರ್ ೩೦ ರಂದು ಹಮ್ಮಿಕೊಳ್ಳಲಾಗಿದೆ.

ಈ ಹೊಚ್ಚ ಹೊಸ ವಿಶಿಷ್ಟ ಕಾರ್ಯಕ್ರಮದ ಹಿಂದೆ ದುಡಿಯುತ್ತಿರುವ, ತಮ್ಮನ್ನು ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿರುವವವರು ಚಿದಾನಂದ ಕಾಮತ್, ಕಾಸರಗೋಡು. ಇಂತಹ ಇನ್ನೂ ಹೆಚ್ಚಿನ ಪ್ರಯತ್ನಗಳು ನಡೆಯಬೇಕು, (ಎರಡು ತಿಂಗಳ ಹಿಂದೆ ಕಲಾವಿದ



ಕೆ.ವಿ.ರಮಣ್ ಅವರ ಸಾರಥ್ಯದಲ್ಲಿ ಶಾಲಾ ಮಕ್ಕಳಿಂದ ಮಂಗಳೂರಿನಾದ್ಯಂತ ಒಂದು ದಿನದ ಪ್ರಥಮ ಸುಗಮ ಸಂಗೀತ ತಿರುಗಾಟ ಮತ್ತು ಜನಸಾಮಾನ್ಯರಿಗೆ ಸುಗಮಸಂಗೀತದ ಅರಿವನ್ನು ಕೊಡುವ ಕಾರ್ಯಕ್ರಮ ಆಯೋಜನೆಗೊಂಡಿತ್ತು.) ಸರಕಾರ– ಸಂಘ–ಸಂಸ್ಥೆಗಳು ಈ ರೀತಿಯ ಮುಕ್ತ ಸುಂದರ ವೇದಿಕೆ; ವಾತಾವರಣವನ್ನು ಮಕ್ಕಳಿಗೆ ಒದಗಿಸಿಕೊಡುವ ಮೂಲಕ ಇನ್ನೂ ಅದೆಷ್ಟೋ ಎಳೆಯ ಪ್ರತಿಭೆಗಳನ್ನು ಬೆಳಕಿಗೆ ತರಬಹುದು.

*–ಗೀತಾ ಕೊಂಕೋಡಿ, ಬಂಟ್ವಾಳ*

**(ಬಂಟ್ವಾಳದ ಇಡ್ಕಿದು ಗ್ರಾಮದ ಶ್ರೀಮತಿ ಗೀತಾ ಕೊಂಕೋಡಿ ಕವಯತ್ರಿ, ಕಥೆಗಾರ್ತಿ, ಪ್ರಗತಿಪರ ಮಹಿಳಾ ಲೇಖಕಿ.)**

## ನುಡಿಸಿರಿಯ ನಡೆಯಲ್ಲಿ ಆಳ್ವಾಸ್

ಇದೇ ಸಾಲಿನ ನವೆಂಬರ್ ೨೮–೨೯–೩೦ ಕ್ಕೆ ಮೂಡಬಿದ್ರಿಯಲ್ಲಿ ಜಾತ್ರೆಯ ವಾತಾವರಣ. ಕಾರಣ, 'ಆಳ್ವಾಸ್ ನುಡಿಸಿರಿ'. ಕನ್ನಡದ ಮನಸ್ಸುಗಳನ್ನು ಬೆಸೆಯುವ ಕನ್ನಡ ನುಡಿ ಹಬ್ಬ. ಸಾಹಿತ್ಯ ಸಮ್ಮೇಳನಗಳ ಗೊಂದಲ, ಗಲಾಟೆಗಳಿಂದ ಕಳಚಿಕೊಂಡು ತನ್ನದೇ ಆದ ವಿಶಿಷ್ಟ ಬಗೆಯ ಸಮ್ಮೇಳನವನ್ನು ಕಳೆದ ೫ ವಷಗಳಿಂದ ಮುನ್ನಡೆಸುತ್ತಾ ಬಂದಿದ್ದಾರೆ ನುಡಿಸಿರಿಯ ರೂವಾರಿ ಡಾ । ಮೋಹನ ಆಳ್ವ. ಜೊತೆಗೆ ಸಾದ್ಯವಾದಷ್ಟೂ ನಮ್ಮೊಳಗಿನ ಕಲೆಯನ್ನು ಗುರುತಿಸಿ ಆಸ್ವಾದಿಸುವ ನಿಟ್ಟಿನಲ್ಲಿ ಈ ಸಂದರ್ಭ ಸಾಕಷ್ಟು ನೃತ್ಯ– ಸಂಗೀತ–ನಾಟಕ, ಯಕ್ಷಗಾನ–ಜಾನಪದ–ರೂಪಕ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸುತ್ತಲೇ ಬಂದಿದ್ದಾರೆ. ಹಾಗಾಗಿ ಕನ್ನಡ ನಾಡಿನ ಕಲಾವಿದರು–ಸಾಹಿತಿಗಳು ಮತ್ತು ಪ್ರತಿಯೋರ್ವ ಕಲೆ–ಸಾಹಿತ್ಯ ಅಭಿರುಚಿಯುಳ್ಳ ಮಂದಿಯ ದೊಡ್ಡ ಗಡಣವೇ ಅಲ್ಲಿ ನೆರೆಯುತ್ತದೆ. ಅವರ ಬೆನ್ನಿಗೆ ದೊಡ್ಡ ಕಲಾಸಕ್ತರ, ಸ್ವಯಂಸೇವಕರ ಬಳಗವೇ ಇದೆ. ಈ ಬಾರಿಯೂ ಮುಂಜಾವಿನಿಂದ ಮಧ್ಯರಾತ್ರಿಯ ವರೆಗೂ ವಿವಿಧ ಗೋಷ್ಟಿಗಳು, ನಾಡು ನುಡಿಯ ಗೀತೆಗಳು, ನೃತ್ಯಗಳು– ರೂಪಕಗಳು, ನಾದ ವೈವಿಧ್ಯಗಳು ಕಲಾ ರಸಿಕರಿಗೆ ಮನ ತೆರೆದು ಕಾದಿವೆ. ಆಸಕ್ತರಿಗೆ ನೀಡುವ ಉಚಿತ ವಸತಿ–ಊಟ ವ್ಯವಸ್ಥೆಯೂ ಅಭಿನಂದನಾರ್ಹ.

ನುಡಿಸಿರಿಯ ಬೆನ್ನಿಗೇ ಡಿಸೆಂಬರ್– ಜನವರಿಯ ಮಧ್ಯಭಾಗದಲ್ಲಿ ಆಯೋಜಿಸಲ್ಪಡುವ ಐದು ದಿನದ ಆಳ್ವಾಸ್ ವಿರಾಸತ್– ಲಲಿತ ಕಲೆಗಳ ಲೋಕದಲ್ಲಿ ಪುಟ್ಟ ಊರೊಂದು ಹೇಗೆ ಕಲೆಯ ವಿಷಯದಲ್ಲಿ ಒಂದು ಮೈಲಿಗಲ್ಲಾಗಬಹುದು ಎಂಬುದಕ್ಕೆ ಸಾಕ್ಷಿ. ವಿದೇಶಗಳಿಂದಲೂ ಕಲಾಸಕ್ತರು ವಿರಾಸತ್‌ಗಾಗಿಯೇ ಬಂದು ಪ್ರತಿ ದಿನವೂ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ತಲೆದೂಗುತ್ತಾರೆ. ಪ್ರತೀ ವರ್ಷವೂ ಕಲೆಯಲ್ಲಿ ಸಾಧನೆಗೈದ ಕಲಾವಿದರಿಗೆ ಪಲ್ಲಕ್ಕಿಯಲ್ಲಿ ಕರೆತಂದು, ರಾಷ್ಟ್ರೀಯ ಪುರಸ್ಕಾರವನ್ನಿತ್ತು,

ಗೌರವಿಸಿ, ನಮಿಸಿ, ವಿಶ್ವಪ್ರಸಿದ್ಧ ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶ ನೀಡಿ ನಲಿಯುವ ವಿರಾಸತ್, ಕರಾವಳಿಯ ಕಲಾಸಕ್ತರು ಕಾಯುವ ಮತ್ತೊಂದು ಹಬ್ಬ. ಹೀಗೆ, ತಮ್ಮ ಸಮಯದಲ್ಲಿ ಬಹುಪಾಲನ್ನೂ ಸಾಹಿತ್ಯ–ಲಲಿತಕಲೆಗಳಿಗೆ ಮೀಸಲಿಡುತ್ತಾ ಬಂದಿರುವ ಡಾ। ಮೋಹನ ಆಳ್ವ ಒಳ್ಳೆಯ ಕಲಾ ಪೋಷಕ, ಪ್ರೋತ್ಸಾಹಕ ಮಾತ್ರವಲ್ಲ ವಿಮರ್ಶಕ, ಕಲಾವಿದ ಕೂಡಾ ! ತಮ್ಮ ಆಳ್ವಾಸ್ ವಿದ್ಯಾ ಸಂಸ್ಥೆಗಳಲ್ಲೂ ಹೆಚ್ಚಿನ ವಿದ್ಯಾರ್ಥಿಗಳನ್ನು ನೃತ್ಯ–ಸಂಗೀತ–ನಾಟಕಗಳಲ್ಲಿ ತೊಡಗಿಸುತ್ತಾ, ನಾಡಿನಾದ್ಯಂತ ಪ್ರವಾಸ ಕೈಗೊಳ್ಳುತ್ತಾ, ನಾನಾ ಬಗೆಯ ಸಾಂಸ್ಕೃತಿಕ ಸಂಜೆಗಳನ್ನು ಆಯೋಜಿಸುತ್ತಾ ಸಾಂಸ್ಕೃತಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಅಪೂರ್ವ ಕಾರ್ಯಕ್ಕೆ ನಮ್ಮೆಲ್ಲರ ಸದಾಶಯಗಳಿರಲಿ.

**–ವಿಷ್ಣುಪ್ರಸಾದ್ . ಎನ್, ಮಂಗಳೂರು.**
**( ಶ್ರೀಯುತರು ಫೆಡರಲ್ ಬ್ಯಾಂಕ್ ಅಧಿಕಾರಿ)**

## ಭರತ ಮಣಿ ರಾಷ್ಟ್ರೀಯ ಸಂಗೀತ– ನೃತ್ಯೋತ್ಸವ

**ಮಂಗಳೂರಿನಲ್ಲಿ ನಡೆದ ಭರತ ನೃತ್ಯ ಕಲಾಸಭಾ ಮತ್ತು ಮಣಿಕೃಷ್ಣ ಸ್ವಾಮಿ ಅಕಾಡೆಮಿ ಅವರ ಸಹಯೋಗದಲ್ಲಿ ಮೊದಲ ಪ್ರಯತ್ನವಾದ ೫ ದಿನಗಳ ಭರತಮಣಿ ಉತ್ಸವದ ಸಮಾರೋಪ ಸಮಾರಂಭದಲ್ಲಿ ನೃತ್ಯವಿದುಷಿ ವಾಣಿ ರಾಜಗೋಪಾಲ್ ಮತ್ತು ಮೃದಂಗ ವಿದ್ವಾನ್ ಜಯಚಂದ್ರ ಅವರಿಗೆ ಈ ಸಾಲಿನ ಪ್ರಶಸ್ತಿ ವಿತರಿಸಲಾಯಿತು. ಈ ಸಂದರ್ಭ ಅಭಿನಂದನಾ ಭಾಷಣ ಮಾಡಿದ ಕಲಾ ವಿಮರ್ಶಕ, ಉದಯವಾಣಿ ಪತ್ರಿಕೆಯ ಹಿರಿಯ ಪತ್ರಕರ್ತ ಎ. ಈಶ್ವರಯ್ಯ ಅವರ ಮಾತುಗಳು ಸಕಾಲಿಕ.**


**ಸಂ**ಗೀತದ ಕಲಿಕೆಯಷ್ಟೇ ಹೆಚ್ಚುತ್ತಾ, ತಾಳ ವಾದ್ಯಗಳ ಕಲಿಕೆ ಇತ್ತೀಚೆಗೆ ಕಡಿಮೆಯಾಗುತ್ತಿರುವುದು ಕಲೆಯ ಕ್ಷೇತ್ರದ ಅಸಮತೋಲನ ಬೆಳವಣಿಗೆ. ಇದರಿಂದ ಸಮನ್ವಯ, ಸಮತೋಲನ ಸಾಧಿಸಲು ಸಾಧ್ಯವಿಲ್ಲ. ಸಂಗೀತ–ನೃತ್ಯ ಕಲಾವಿದರಷ್ಟೇ ತಾಳವಾದ್ಯ ಕಲಾವಿದರು ಹೊರಬಂದರೆ ಸರ್ವತೋಮುಖ ಪ್ರಗತಿ ಕಾಣಬಹುದು.

**– ವೈಷ್ಣವಿ, ಮಂಗಳೂರು.**
**(ನೂಪುರ ಭ್ರಮರಿ ಪತ್ರಿಕೆಯ ಅಂಕಣಕಾರರು.)**





# ಹಸ್ತ ಮಯೂರಿ



## ಕಟಕಾಮುಖ

**ಲಕ್ಷಣ:** ತೋರು ಮತ್ತು ಮಧ್ಯಮ ಬೆರಳುಗಳ ತುದಿಗೆ ಹೆಬ್ಬೆರಳು ತುದಿಯನ್ನು ಸೇರಿಸಿ ಕಿರು ಮತ್ತು ಉಂಗುರ ಬೆರಳನ್ನು ಮೇಲಕ್ಕೆ ವಿರಳವಾಗಿ ನೀಡಿದರೆ ಕಟಕಾಮುಖ ಹಸ್ತ.

ಆದರೆ ನಾಟ್ಯಶಾಸ್ತ್ರದ ಲಕ್ಷಣದಂತೆ ಉಂಗುರಬೆರಳು ಮತ್ತು ಕಿರು ಬೆರಳುಗಳನ್ನು ವಕ್ರವಾಗಿ ಎತ್ತಿ ಹಿಡಿದು ಉಳಿದ ತೋರು, ಮಧ್ಯ ಬೆರಳನ್ನು ಹೆಬ್ಬೆರಳಿಗೆ ಜೋಡಿಸಬೇಕು.

ಲಾಸ್ಯರಂಜನದ ಪ್ರಕಾರ ಕಪಿತ್ಥಹಸ್ತದ ಕಿರುಬೆರಳು ಮತ್ತು ಉಂಗುರಬೆರಳನ್ನು ಅಂಗೈಯಿಂದ ಮೇಲಕ್ಕೆತ್ತಿ ವಿರಳ ಮಾಡಿ ಸ್ವಲ್ಪ ಬಗ್ಗಿಸಬೇಕು. ಇನ್ನೊಂದು ವಿಧಾನದಲ್ಲಿ ಕಿರು ಮತ್ತು ಉಂಗುರ ಬೆರಳನ್ನು ಅಂಗೈಯೊಳಗೆ ಸ್ವಲ್ಪ ಮಡಚಿ, ಹೆಬ್ಬೆರಳಿನ ತುದಿಗೆ ಮಧ್ಯ ಮತ್ತು ತೋರು ಬೆರಳುಗಳ ಮೊದಲ ಮೇಲಿನ ಗೆರೆ ತಾಕುವಂತೆ ಹಿಡಿಯಬೇಕು. ಹೀಗೆ ಆಯಾಯ ಶಾಸ್ತ್ರಗಳಿಗನುಗುಣವಾಗಿ ೪ ಲಕ್ಷಣಗಳಿವೆ. ನೃತ್ಯದ ಸಮಯದಲ್ಲಿ ಹೇರಳವಾಗಿ ಉಪಯೋಗಿಸಲ್ಪಡುವ ಹಸ್ತವಿದು.

ಯೋಗದಲ್ಲಿ ಬರುವ ಚಿಕಿತ್ಸದಾಯಕ ಮುದ್ರೆಗಳ ಪೈಕಿ ಅಂಗೈ ಮೇಲ್ಮುಖವಾಗಿರಿಸಿದ ಕಟಕಾಮುಖ ಹಸ್ತಕ್ಕೆ **ವ್ಯಾನಮುದ್ರೆ** ಅಥವಾ **ಕುಬೇರಮುದ್ರೆ** ಎಂದು ಹೆಸರು. ಮಾನಸಿಕ ನೆಮ್ಮದಿಗೆ, ಒತ್ತಡ ನಿವಾರಣೆಗೆ, ಆಂತರಿಕ ಶಾಂತಿಗೆ, ಆತ್ಮವಿಶ್ವಾಸಕ್ಕೆ, ಆಯಾಸ ನಿವಾರಣೆಗೆ, ಇಷ್ಟಾರ್ಥಸಾಧನೆಗೆ, ರಕ್ತ ಪರಿಚಲನೆಯ ಸಮತೋಲನಕ್ಕೆ ಈ ಮುದ್ರೆ ಸಹಕಾರಿ.

ಕುಮಾರ ಸುಬ್ರಹ್ಮಣ್ಯನು ಈಶ್ವರನಿಂದ ಧನುರ್ವಿದ್ಯೆ ಕಲಿಯುವಾಗ ಈ ಹಸ್ತ ಉಗಮವಾಯಿತೆನ್ನಲಾಗಿದೆ. ಇದರದ್ದು ಸ್ವರ್ಣ ಬಣ್ಣ, ದೇವ ಜಾತಿ, ಭಾರ್ಗವ ಋಷಿ, ರಘುರಾಮ ದೇವತೆ. ಕಥಕ್ಕಳಿ ಮತ್ತು ಮಣಿಪುರಿ ನೃತ್ಯ ಪ್ರಕಾರಗಳಲ್ಲಿ ಇದನ್ನು ಹಂಸಾಸ್ಯವೆಂದು ಕರೆಯುವುದು ರೂಢಿ. ಏಕೆಂದರೆ ಮಧ್ಯ ಬೆರಳನ್ನು ನಿಡಿದಾಗಿ ಹಿಡಿದರೆ ಏರ್ಪಡುವುದೇ ಹಂಸಾಸ್ಯ ಹಸ್ತ. ಸಾಮಾನ್ಯ ಜೀವನದಲ್ಲಿ ದೇವರಿಗೆ ಅರ್ಚನೆ ಮಾಡಲು, ಮೂಗು ಮುಚ್ಚಿಕೊಳ್ಳುವುದು, ಕತ್ತಿಗೆ ಕಿವಿಗೆ ಆಭರಣ ಹಾಕಿಕೊಳ್ಳುವುದು ಮುಂತಾಗಿ ತೋರಿಸಲು ಈ ಹಸ್ತವನ್ನು ಬಳಸುತ್ತಾರೆ.

**ನೃತ್ಯದಲ್ಲಿನ ವಿನಿಯೋಗಗಳು:** ಹೂಬಿಡಿಸುವುದು, ಮುತ್ತಿನ ಅಥವಾ ಹೂವಿನ

ಹಾರ ಹಾಕಿ ಕೊಳ್ಳುವುದು, ಬಾಣಗಳ ನಿಧಾನ ಪ್ರಯೋಗ, ವೀಳ್ಯೆದೆಲೆಯನ್ನೀಯುವುದು, ಕಸ್ತೂರಿ ಮೊದಲಾದ ವಸ್ತುಗಳು, ಕೊಡಿಸುವುದು, ವಾಸನೆ ನೋಡುವುದು, ಮಾತು, ದೃಷ್ಠಿಭಾವ ತೋರಿಸುವುದು.

**ಇತರೆ ವಿನಿಯೋಗ:** ಹೋತ್ರ, ಹವ್ಯ, ಕೊಡೆ, ಲಗಾಮು ಹಿಡಿಯುವುದು, ಧನುಸ್ಸಿನ ಹೆದೆ ಎಳೆಯುವುದು, ವೀಣಾವಾದನದಲ್ಲಿ ತಂತಿ ಮೀಟುವುದು, ಚಾಟಿಯಿಂದ ಹೊಡೆಯುವುದು, ಹೂಕೊಯ್ಯುವುದು, ಬಾಚಣಿಗೆ, ಕನ್ನಡಿ ಮೊದಲಾದವನ್ನು ಹಿಡಿಯುವುದು, ರಂಗವಲ್ಲಿ ಹಾಕುವುದು, ಉದ್ದವಾದ ಕೋಲನ್ನು ಹಿಡಿಯುವುದು, ಮನ್ಮಥನ ಬಾಣದ ಆಕರ್ಷಣೆ, ಬಾರುಕೋಲನ್ನು ಉಪಯೋಗಿಸುವುದು, ಬಟ್ಟೆಯಿಂದ ಮುಖ ಮರೆಮಾಡಿ ವಿವಾಹದಲ್ಲಿ ಇಲ್ಲವೇ ಬೇರೆ ಸಂದರ್ಭದಲ್ಲಿ ಸ್ತ್ರೀಯನ್ನು ನೋಡಲು, ದೃಢತರ ವಾಹನವನ್ನು ಎತ್ತುವುದು, ಪಾದಾಚಾರಿ ನರ್ತನ, ನಾಟ್ಯದ ಕೊನೆ, ದೇವತೆಗಳ ಅಭಿಷೇಕ, ಮರ್ಯಾದೆ, ಮುಖಕ್ಕೆ ಅಲಂಕಾರದ ಹುಡಿಹಾಕುವುದು, ಬಲಿ, ಕೊಡೆ ಬೀಸಣಿಕೆ, ಕನ್ನಡಿ ಹಿಡಿಯುವುದು, ಚಿತ್ರ ಬರೆಯುವುದು, ದೊಡ್ಡ ಚಿತ್ರ ಹಿಡಿಯುವುದು, ಮಂಥನ, ಬಟ್ಟೆಯ ಅಂಚು ಹಿಡಿ, ಅಂಕಂಶ, ಸ್ತ್ರೀ, ಪಾಶಾಂಕುಶ, ಕಾಲುಬಳೆಯನ್ನು ತೋರಿಸಲು ಬಳಸಲಾಗುತ್ತದೆ.

ನಾಟ್ಯಶಾಸ್ತ್ರದಲ್ಲಿ ಹೇಳಲಾದ ನೃತ್ತ ಹಸ್ತಗಳ ಪೈಕಿ ಮೊದಲನೆಯ ಹಸ್ತ **ಚತುರಶ್ರ**. ಎದೆಯಿಂದ ಎಂಟು ಅಂಗುಲಗಳ ದೂರದಲ್ಲಿ ಇದಿರಾಗಿ ಕಟಕಾಮುಖದ ಹಸ್ತಗಳನ್ನು ಭುಜಗಳ ಎತ್ತರಕ್ಕೆ ಬರುವಂತೆ ಹಿಡಿಯುಬೇಕು ; ಭುಜ ಮತ್ತು ಮೊಣಕೈಗಳನ್ನು ಒಂದೇ ಸಮದಲ್ಲಿಡಬೇಕು ಎಂಬುದು ಇದರ ಲಕ್ಷಣ. ಪಟ್ಟಾಭಿಷೇಕ, ಕುದುರೆಯ ಸವಾರ, ಕಡೆಯುವುದು, ಹಿಡಿಯುವುದು, ಹಾಲು ಕರೆಯುವುದು, ಮುತ್ತನ್ನು ಧರಿಸುವುದು, ಹಗ್ಗ ಎಳೆಯುವುದು, ಹೂವು ಹಿಡಿಯುವುದು ಮುಂತಾಗಿ ಇದರ ವಿನಿಯೋಗಗಳಿವೆ. ಅದೇ ರೀತಿ **ಮುಷ್ಠಿಕ ಸ್ವಸ್ತಿಕ** ಎಂಬ ನೃತ್ತ ಹಸ್ತದ ಲಕ್ಷಣ ಕಟಕಾಮುಖ ಹಸ್ತಗಳನ್ನು ಮುಂಗೈಯಲ್ಲಿ ಬಗ್ಗಿಸಿ ಎದುರಿಗೆ ಕಳಿಸುವುದು. ವಿನಿಯೋಗ ಚೆಂಡಿನ ಆಟ, ಮಲ್ಲಯುದ್ಧ,ಅತಿಯಾದ ನಾಚಿಕೆ.

ಕಾಲಗಳ ಸೂಚನೆಯಲ್ಲಿ ಹಸ್ತಗಳಲ್ಲಿ ಒಂದಾದ ಸೂರ್ಯಾಸ್ತಮಾನವನ್ನು ಎರಡು ಕೈಗಳಲ್ಲಿ ಕಟಕಾಮುಖ ಹಸ್ತವನ್ನಿಟ್ಟು ಸಮಪಾದದಲ್ಲಿ( ಕಾಲುಗಳನ್ನು ಜೋಡಿಸಿ) ನಿಂತು, ಓರೆಕೆಳನೋಟವನ್ನು ಮಾಡುವುದರಿಂದ ಸೂಚಿಸಬಹುದು. ಎಡಗೈಯಲ್ಲಿ ಶಿಖರ ಹಸ್ತವನ್ನು, ಬಲಗೈಲಿ ಕಟಕಾಮುಖವನ್ನು (ಲಾಸ್ಯರಂಜನದ ಲಕ್ಷಣದಂತೆ) ಹಿಡಿದು ಧನುಸ್ಸಿನಂತೆ ಆಕರ್ಣಪರ್ಯಂತ ಎಳೆಯುವುದು ಶ್ರೀರಾಮಾವತಾರ ಹಸ್ತವನ್ನು ಸೂಚಿಸುತ್ತದೆ. ಶ್ರೀಕೃಷ್ಣಾವತಾರ ಹಸ್ತದಲ್ಲಿ ಕೆಲವೊಂದು ಬಾರಿ ಕಟಕಾಮುಖ ಹಸ್ತಗಳನ್ನು ಎರಡು ಭುಜಗಳ ಬಳಿ ಅನ್ಯೋನ್ಯಭಿಮುಖವಾಗಿ ಹಿಡಿಯುವ ಪದ್ಧತಿ ಭರತನೃತ್ಯ ಮತ್ತು ಒಡಿಸ್ಸಿಯಲ್ಲಿದೆ. ಹೆಂಡತಿಯ ಸಹೋದರ ಅಥವಾ ಭಾವಮೈದುನನೆನ್ನುವ ಶ್ಯಾಲಕಹಸ್ತಕ್ಕೂ ಇದರ ಬಳಕೆಯಿದೆ.




# ಕಲಾವಿದನ ಅಂತರಂಗದ ಕಥನ : ಯಕ್ಷೋಪಾಸನೆ

— 'ಮನೂ' ಬನ

ಯಕ್ಷೋಪಾಸನೆ– ಸೂರಿಕುಮೇರಿ ಕೆ. ಗೋವಿಂದ ಭಟ್ಟರ ಆತ್ಮವೃತ್ತಾಂತ
ನಿರೂಪಣೆ : ಡಾ ! ಎಂ. ಪ್ರಭಾಕರ ಶಿಶಿಲ
ಪ್ರಕಾಶನ : ಡಾ । ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ, ಸಂಪಾಜೆ
ಮುದ್ರಣ : ಮಂಜುಶ್ರೀ ಪ್ರಿಂಟರ್ಸ್, ಉಜಿರೆ
ಬೆಲೆ : ೨೦೦ ರೂಗಳು

ಆತ್ಮವೃತ್ತಾಂತಗಳು ಯಾವುದೇ ವ್ಯಕ್ತಿಯ ಸಮಗ್ರ ಸಾಹಿತ್ಯ, ಶೋಧನೆ, ಕೃಷಿಯನ್ನು ನಿರೂಪಿಸುವಂತದ್ದು. ಆದರೆ ಇತ್ತೀಚೆಗೆ ಕಲಾವಿದರ ಕೃತಿಗಳು, ಕಥನಗಳು ಅಪರೂಪವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಇತ್ತೀಚೆಗಷ್ಟೇ ಅನಾವರಣಗೊಂಡ ಯಕ್ಷೋಪಾಸನೆ ರಂಗದ, ಕಲಾವಿದನ ಸಾಧ್ಯತೆಗಳನ್ನು, ಇತಿಮಿತಿಗಳನ್ನು ಆದ್ಯಂತವಾಗಿ ವಿವರಿಸುತ್ತದೆ. ತೆಂಕುತಿಟ್ಟಿನ ಮೇರು ಕಲಾವಿದ ಸೂರಿಕುಮೇರಿ ಕೆ. ಗೋವಿಂದ ಭಟ್ಟರ ಆತ್ಮಕಥನ ಈ ನಿಟ್ಟಿನಲ್ಲಿ ಒಳ್ಳೆಯ ಪ್ರಯತ್ನ. ಹಾಗಾಗಿ ಓದುಗರು ಓದಲೇಬೇಕಾದ ಪುಸ್ತಕಗಳ ಪೈಕಿ ಯಕ್ಷೋಪಾಸನೆಯೂ ಒಂದು.




ಕಲಾರಂಗದಲ್ಲಿನ ಓದಿಗಾಗಿ, ಕಲೆಯೊಂದರ ಅನುಭವಕ್ಕಾಗಿ ಯಕ್ಷೋಪಾಸನೆ ಒಳ್ಳೆಯ ಕೊಡುಗೆ. ಈ ನಿಟ್ಟಿನಲ್ಲಿ ಯಕ್ಷಗಾನದ ಒಳನೋಟಗಳನ್ನು ಕಟ್ಟಿಕೊಡುವುದರೊಂದಿಗೆ, ಕಲಾವಿದನ ಅಂತರಂಗದ ಅಭಿವ್ಯಕ್ತಿಗೆ ಗೌರವವನ್ನಿತ್ತಿದ್ದಾರೆ ಪ್ರಕಾಶಕರು. ಡಾ। ಎಂ. ಪ್ರಭಾಕರ ಜೋಷಿ ಅವರ ಬೆನ್ನುಡಿ, ಟಿ. ಶ್ಯಾಮ ಭಟ್ಟರ ಬೆನ್ನುಡಿಯೊಂದಿಗೆ ಮೇರು ಕಲಾವಿದರೊಬ್ಬರ ಅಂತರಂಗ, ಕಷ್ಟ–ನಷ್ಟಗಳು, ಹಿರಿಮೆ–ಗರಿಮೆಗಳನ್ನು ಸೊಗಸಾಗಿ ನಿರೂಪಿಸಿದ್ದಾರೆ ಡಾ। ಬಿ. ಪ್ರಭಾಕರ ಶಿಶಿಲ ಅವರು. ಜೊತೆಗೆ ಸೊಗಸಾದ ಛಾಯಾಚಿತ್ರಗಳು. ಹೃದಯ ಸಂವಾದ, ಒಂದಷ್ಟು ಪೂರಕ ಮಾಹಿತಿಗಳು... ಪುಸ್ತಕ ಪರಿಚಯ ಇಲ್ಲಿದೆ.. ನೀವೊಮ್ಮೆ ಓದುವುದಷ್ಟೇ ಬಾಕಿ ಉಳಿದಿದೆ.

**ಹೆಸರಿಸಲೇಬೇಕಾದ ಆಯ್ದ ತುಣುಕುಗಳು ನಿಮ್ಮ ಓದಿಗೆ..,**

✴ ಪಾತ್ರ ಯಾವುದೇ ಇರಲಿ ತಕರಾರಿಲ್ಲದೇ ಕಲಾವಿದ ಒಪ್ಪಿಕೊಂಡರೆ ಬೆಳೆಯುತ್ತಾನೆ ಮತ್ತು ಪ್ರಯೋಗ ಯಶಸ್ವಿಯಾಗುತ್ತದೆ. ನಮ್ಮನ್ನು ನಾವು ಒಂದೆರಡು ಪಾತ್ರಗಳಿಗೆ ಮಾತ್ರ

ಮಿತಿಗೊಳಿಸಿಕೊಂಡರೆ ಕಲಾ ಮಾಧ್ಯಮ ಸೊರಗುತ್ತದೆ. ಇಡೀ ತಂಡವಾಗಿ ದುಡಿದರೆ ಎಂತಹ ಪ್ರಸಂಗವನ್ನಾದರೂ ಯಶಸ್ವಿಗೊಳಿಸಬಹುದು. ( ಪುಟ ೧೩೩)

✵ ಕಲಾ ಪ್ರಕಾರವೊಂದು ಶಿಥಿಲವಾಗುವುದು ಕಲಾ ಇತಿಹಾಸದಲ್ಲಿ ತೀರಾ ಸಾಮಾನ್ಯವಾದ ಸಂಗತಿ.

ಕ್ಷಣಿಕ ಜನಪ್ರಿಯತೆಗೆ ವೇಷಧಾರಿಗಳು ಮಾರುಹೋದರೆ ಕಲಾವಿದ ರೂಪುಗೊಳ್ಳಲು ಸಾಧ್ಯವಿಲ್ಲ.

ಪೌರಾಣಿಕ ಪಾತ್ರಗಳ ಒಳಹೊಕ್ಕು ಚಿಕಿತ್ಸಕ ದೃಷ್ಟಿಕೋನದಿಂದ ಪಾತ್ರಾಭಿವ್ಯಕ್ತಿ ಮಾಡುವವರ ಅಗತ್ಯವಿದೆ. ( ಪುಟ ೧೩೫)

✵ ರಂಗದ ಕಡೆಗೆ ಪ್ರತಿಯೊಬ್ಬನೂ ಲಕ್ಷ್ಯವಿಟ್ಟಿರಬೇಕು. ಸಭಾಸದರ ಬಗ್ಗೆ ಯಾವತ್ತೂ ಅಲಕ್ಷ್ಯ ಸಲ್ಲದು. ರಂಗಸ್ಥಳದಲ್ಲಿ ಹೇಳುವ ನೈತಿಕ, ಧಾರ್ಮಿಕ ವಿಚಾರಗಳನ್ನು ಸಾಧ್ಯವಾದಷ್ಟು ಜೀವನದಲ್ಲಿಯೂ ಅಳವಡಿಸಲು ಪ್ರಯತ್ನಿಸಬೇಕು. (ಪುಟ ೧೪೬ )

✵ ಒಂದು ಕಲೆ ಇನ್ನೊಂದರಿಂದ ಪ್ರಭಾವಿತವಾಗಿ ಬೆಳವಣಿಗೆ ಹೋಂದುವುದು ತೀರಾ ಸಹಜವಾದ ವಿದ್ಯಮಾನ. ಯಾವುದರ ಮೂಲ ಯಾವುದು? ಎಂಬ ಜಿಜ್ಞಾಸೆ ಬೀಜ–ವೃಕ್ಷ ನ್ಯಾಯದಷ್ಟೇ ಜಟಿಲವಾದುದು. ( ಪುಟ ೧೬೩)

✵ ಕಲೆಗೆ ಒಂದು ಸಾಮಾಜಿಕ ಬದ್ಧತೆಯಿರಬೇಕು. ಆಗ ಮಾತ್ರ ಕಲೆಗೆ ಬೆಲೆ ಬರುತ್ತದೆ. ( ಪುಟ ೧೬೭)

✵ ರಂಗದಲ್ಲಿ ಸಕ್ರಿಯನಾಗಿರುವ ವೇಷಧಾರಿಗೆ ಅಭಿಮಾನಿಗಳು, ಆತ್ಮೀಯರು ಸಾಕಷ್ಟು ಸಂಖ್ಯೆಯಲ್ಲಿರುತ್ತಾರೆ. ರಂಗದಿಂದ ನಿರ್ಗಮಿಸಿದ ಬಳಿಕ ಏನು ಎಂಬ ಪ್ರಶ್ನೆ ಕಾಡುವಂತಾಗಬಾರದು. ( ಪುಟ ೧೩೬)

✵ ಹಿರಿಯರಲ್ಲಿ ಕಲಾಸಕ್ತಿಯ ಸಂಸ್ಕಾರವಿದ್ದರೆ ಕಿರಿಯರಲ್ಲಿ ಬಾರದಿರಲು ಸಾಧ್ಯವೇ? ಹೆತ್ತವರು ಎಳವೆಯಲ್ಲೇ ಮಕ್ಕಳಲ್ಲಿ ಯಕ್ಷಗಾನ, ಸುಗಮಸಂಗೀತ, ಭರತನಾಟ್ಯ ಮತ್ತು ಯೋಗಾಸನಗಳ ಆಸಕ್ತಿ ಕುದುರಿಸಬೇಕು. ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರು ಕಲೆ ಮತ್ತು ಸಾಹಿತ್ಯ ಆರಾಧಕರೂ , ವಿಮರ್ಶಕರೂ ಆಗಬೇಕು.



ವಾಸ್ತವವಾಗಿ ಕಲೆಗೆ ಜಾತಿ–ಧರ್ಮಗಳ ಹಂಗಿಲ್ಲ.

ನಿಜವಾದ ಧರ್ಮಗುರು ಕಲಾ ಪ್ರಕಾರಕ್ಕೂ ಜಾತಿ–ಧರ್ಮಗಳಿಗೂ ಸಂಬಂಧ ಕಲ್ಪಿಸಲಾರ. ಕಲಾವಿದರು ಮತ್ತು ಸಾಹಿತಿಗಳು ಜಾತ್ಯಾತೀತರು. ಸಾಗರಕ್ಕೇಕೆ ಷಟ್ಪದಿಯ ಬಂಧ?– ( ಪುಟ ೧೩೭)

✵ ರಸಾಸ್ವಾದನೆಯಿಲ್ಲದೆ ಭಕ್ತಿಗೆ ಮಾತ್ರ ಮಹತ್ವ ಸಿಕ್ಕಾಗ ಕಲೆ ಸೊರಗುತ್ತದೆ. ( ಪುಟ ೧೭೦)

✵ ಕಲೆಯೊಂದನ್ನು ಧಾರ್ಮಿಕ ಕ್ರಿಯೆಯನ್ನಾಗಿಸಿ ಪರಿವರ್ತಿಸುವ ಪ್ರದರ್ಶನಗಳಿಂದ ಕಲೆಗಾಗಲೀ, ಕಲಾವಿದರಿಗಾಗಲೀ ಚಿಕ್ಕಾಸು ಪ್ರಯೋಜನವಿರಲು ಸಾಧ್ಯವಿಲ್ಲ. (ಪುಟ ೧೭೧)

✵ ಕಲಾ ಪ್ರಕಾರಕ್ಕೆ ಹೇಗೆ ಜಾತಿ–ಧರ್ಮಗಳ ಹಂಗಿಲ್ಲವೋ ಹಾಗೆಯೇ ಭಾಷೆಯ ಹಂಗೂ ಇಲ್ಲ. ( ಪುಟ ೧೪೯)

✵ ಎಲ್ಲಾ ಕಲೆಗಳಲ್ಲೂ ಪ್ರಾಂತೀಯ ವ್ಯತ್ಯಾಸವಿದ್ದೇ ಇರುತ್ತದೆ. (ಪುಟ ೧೪೦)

✵ ಮನುಷ್ಯರಿರುವಷ್ಟೂ ಬುದ್ಧಿ ಮನಸ್ಸುಗಳೂ ಇರುತ್ತವೆ. ಆಕೃತಿಬೇಧಗಳೂ ಇರುತ್ತವೆ.

ಕಲೆ ಕಲೆಗಾಗಿ ಅಲ್ಲ. ಪ್ರೇಕ್ಷಕರಿಗಾಗಿ ಅಥವಾ ಶ್ರೋತೃಗಳಿಗಾಗಿ. ಎಲ್ಲಾ ಕಲಾ ಪ್ರಾಕಾರಗಳಲ್ಲೂ, ಸಂಪ್ರದಾಯಗಳಲ್ಲೂ ನಮಗೆ ಪ್ರತ್ಯಕ್ಷವಾಗಿ ಈ ವಿಚಾರಗಳನ್ನು ಕಾಣಲು ಸಾಧ್ಯ. (ಪುಟ ೧೪೫)

✵ ಕಲೆ ಮತ್ತು ಸಾಹಿತ್ಯದ ಉದ್ದೇಶ ಜನರನ್ನು ಒಂದುಗೂಡಿಸುವುದು.

ಜಾತಿ ಮತ್ತು ವರ್ಣಗಳನ್ನು ಸಮರ್ಥಿಸುವವರು ಕಲಾವಿದರಾಗಲು ಸಾಧ್ಯವಿಲ್ಲ.

ಹೊಟ್ಟೆಕಿಚ್ಚು, ನಕಾರಾತ್ಮಕ ಚಿಂತನೆ, ಕಾಲೆಳೆಯುವ ಪ್ರವೃತ್ತಿಯವರು ಸಾಧಕರಾಗಲು ಸಾಧ್ಯವಿಲ್ಲ.

ಯಾವುದೇ ಕಲೆ ಕಲೆಯಾಗಿ ಪ್ರತಿಗಾಮಿಯಾಗಿರಲು ಸಾಧ್ಯವಿಲ್ಲ. ಆ ಕಲೆಯ ಮೂಲಕ ನೀವು ಸಾರುವ ಮೌಲ್ಯ ಪ್ರತಿಗಾಮಿಯಾಗಿರಲೂಬಹುದು.

ಕಲಾವಿದರು ಪ್ರತಿಗಾಮಿಗಳಾದರೆ ಕಲೆಯ ದುರ್ಬಳಕೆಯಾಗುತ್ತದೆ. ಅದು

ಕಲಾವಿದರ ದೋಷವೇ ಹೊರತು ಕಲೆಯ ದೋಷವಲ್ಲ. ( ಪುಟ ೧೩೮)

✯ ಯಾವುದೇ ಒಂದು ಕಲೆಗೆ ಅದರದೇ ಆದ ಇತಿಮಿತಿಗಳಿವೆ. ಕಲೆಯೊಂದು ಕ್ರಾಂತಿಯ ಸಾಧನವಾಗಬೇಕೆಂದು ಬಯಸುವ ಅಗತ್ಯವಿಲ್ಲವೆಂದು ನನಗನ್ನಿಸುತ್ತದೆ. ಪ್ರತಿಗಾಮಿ ಮೌಲ್ಯಗಳ ಪ್ರತಿಪಾದನೆಗೆ ದುರ್ಬಳಕೆಯಾಗದಿದ್ದರೆ ಸಾಕು.

ಕಲೆ ನಿಂತ ನೀರಲ್ಲ. ನಿರಂತರ ಹರಿಯುತ್ತಿರುವ ಪ್ರವಾಹ. ಹಳೆಯ ನೀರು ಹೋಗಿ ಹೊಸ ನೀರು ಬಾರದೆ ಇದ್ದರೆ ಅದು ಪ್ರವಾಹವಾಗದು.

ಮೂಲಭೂತ ಮೌಲ್ಯವನ್ನು ಉಳಿಸಿಕೊಂಡು, ಸಮಕಾಲೀನ ಪ್ರಜ್ಞೆಯನ್ನು ತಿಳಿದು ಕಲಾವಿದ ನಟಿಸಿದಾಗ ಸುಂದರವಾದ ರೂಪಕಗಳನ್ನು ಶ್ರೋತೃಗಳಿಗೆ, ಪ್ರೇಕ್ಷಕರಿಗೆ ನೀಡಬಹುದು. ಸಮಕಾಲೀನವಾದ ನಾನಾ ರೀತಿಯ ಬಳಕೆಗಳನ್ನು ನಾವಿಂದು ಪ್ರತ್ಯಕ್ಷವಾಗಿ ಕಾಣುತ್ತಿರುವಾಗ ಜೀವನದ ಒಂದು ಅವಿಭಾಜ್ಯ ಅಂಗವಾದ ಕಲೆಯಲ್ಲಿ ಬೇಡವೆನ್ನುವುದು ಸಾಧುವಲ್ಲ. ಆದರೆ ಎಷ್ಟು ಪರಿವರ್ತನೆಯಾದರೂ ಮೂಲಭೂತ ಸಿದ್ಧಾಂತಗಳು ಬದಲಾಗುವುದಿಲ್ಲ. ನಾನಾ ರೀತಿಯ ವ್ಯಂಜನಗಳು, ಪಾಕಗಳು ಸಿದ್ಧವಾಗಿದ್ದರೂ ಮನುಷ್ಯ ಹೊಟ್ಟೆಯಳತೆ ಮೀರಿ ಉಣ್ಣಲಾರ. ನಾನಾ ಬಣ್ಣ, ಬೆಲೆಯ ಬಟ್ಟೆಗಳ ರಾಶಿ ಇದ್ದರೂ ಮೈಯ ಅಳತೆ ಮೀರಿ ಧರಿಸಲಾರ. ಇದನ್ನರಿತು ಬದಲಾದರೆ ಚೆನ್ನ. ( ಪುಟ ೧೪೩)

✯ ಸ್ವಯಂ ಪ್ರಜ್ಞೆಯೇ ಇಲ್ಲದವನಿಗೆ, ಸಮಕಾಲೀನ, ಅರ್ವಾಚೀನ, ಪ್ರಾಚೀನ ಎಂಬ ಭ್ರಮೆ ಯಾಕೆ? ಕಲಾವಿದನೂ, ಪ್ರೇಕ್ಷಕನೂ ಪರಸ್ಪರ ರಸಾನುಭೂತಿಯನ್ನು ಹೊಂದಿರಬೇಕಾದರೆ ; ನಟನ ಸಾಮರ್ಥ್ಯ, ಬೌದ್ಧಿಕ ಸತ್ವ, ಮಾನಸಿಕ ಸ್ಪಂದನ, ಅನುಭವ ಜನ್ಯವಾದ ವಿಶೇಷ ಸಮಯ ಪ್ರಜ್ಞೆ ಎಲ್ಲವೂ ಅನಿವಾರ್ಯ.

ಯಾವ ಕಲಾವಿದನಿಗಾದರೂ ಎಲ್ಲಾ ರೀತಿಯ ಪ್ರೇಕ್ಷಕ ವರ್ಗದವರನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ. ಪುರಾಣಗಳನ್ನೋದಿ ಶಾಸ್ತ್ರಗಳನ್ನು ತಿಳಿದು, ಭಾಷಾ ಪ್ರಭುತ್ವವನ್ನು ಸಂಪಾದಿಸಿ, ಇದೇ ಸರಿ ಎಂದು ಹೇಳಬಲ್ಲವರು ವಿರಳ. ಪ್ರಾಯಶಃ ಅಂತಹ ವಿದ್ವಾಂಸ ಬಂದರೆ ಆಟ ನೋಡಿ ಏನೂ ಹೇಳುವುದಿಲ್ಲ. ಹೇಳಿದರೆ ಕೇಳಿ ತಿಳಿಯಬೇಕೆಂಬ ಮನೋಭಾವ ಕಲಾವಿದರಿಗೂ ಇರುವುದಿಲ್ಲ. ಈ ದೃಷ್ಟಿಯಿಂದ ಸಮಕಾಲೀನ ಪ್ರಜ್ಞೆ ಅನಿವಾರ್ಯ. ಮೊದಲಿದ್ದಂತೆಯೇ ಇರಲಿ, ಅಷ್ಟೇ ಸಾಕು ಎಂಬವರಿಗೆ ಸಮಕಾಲೀನ ಪ್ರಜ್ಞೆ ಅನಿವಾರ್ಯವಲ್ಲ. ಇದಕ್ಕೆ ಕಾರಣರು ಮೊದಲು ಪ್ರೇಕ್ಷಕರು. ಆ ಮೇಲೆ ಕಲಾವಿದರು. ಹೊಣೆಯರಿತ ಪ್ರೇಕ್ಷಕನಿದ್ದರೆ ಕಲಾವಿದ ಎಚ್ಚರಿಕೆಯಿಂದಿರುತ್ತಾನೆ. ಕಲಾವಿದನು ಸರಿಯಾಗಿದ್ದರೆ ನೋಟಕರು ರಸಾಸ್ವಾದನೆಯನ್ನು ಮಾಡುತ್ತಾರೆ.

ಸಮಕಾಲೀನ ಪ್ರಜ್ಞೆ ಎಂದರೇನು? ಕಲೆಯ ಜನಪ್ರಿಯತೆಯನ್ನಳೆಯುವ ಮಾನದಂಡ ಯಾವುದು? ಪ್ರೀತಿಗೂ ಪ್ರಿಯತೆಗೂ ಇರುವ ಅಂತರವನ್ನಳೆಯುವುದೆಂತು? ಯಶಸ್ವಿಯಾಗಿದೆಯೇ



ಇಲ್ಲವೇ ತಿಳಿಯುವ ಬಗೆ ಹೇಗೆ? ಪರಂಪರೆಗೆ ಧಕ್ಕೆಯಾಗಬೇಕಾದರೆ ಯಾವುದು ಪರಂಪರೆ? ಈ ಅನಿಸಿಕೆಗಳು ಯಾರಿಂದ?

ಸಮಕಾಲೀನ ಪ್ರಜ್ಞೆಯೆನ್ನುವುದಕ್ಕೆ ಸದ್ಯದ ಸ್ಥಿತಿಯೆಂದಷ್ಟೇ ಅರ್ಥ ಕಲ್ಪಿಸಿಕೊಳ್ಳುವುದು ಸೂಕ್ತ. ( ಪುಟ ೧೪೪)

✯ ಮೂಲ ಚೌಕಟ್ಟನ್ನು ಉಳಿಸಿಕೊಂಡು ಬದಲಾವಣೆಗಳನ್ನು ಸ್ವಾಗತಿಸಬೇಕಾದುದು ಕಾಲಧರ್ಮ. (೧೬೯)

✯ ಜೀವನದಲ್ಲಿ ಅಪಮಾನದ ಪ್ರಸಂಗಗಳಿದ್ದರೇನೇ ಸಾಧನೆಗಳನ್ನು ಮಾಡಲು ಸಾಧ್ಯವಾಗುವುದು. "ಅಪಮಾನಂ ತಪೋವೃದ್ಧಿಃ ಸನ್ಮಾನಂತು ತಪಃ ಕ್ಷಯ". (ಪುಟ ೧೭೩)

✯ ಬದುಕಿದ್ದೂ ರಂಗದಲ್ಲಿ ಕಾಣಿಸಿಕೊಳ್ಳಲಾಗದ ಅದೆಷ್ಟು ಕಲಾವಿದರು ನಮ್ಮ ನಡುವೆ ಭೂತಕಾಲವನ್ನು ನೆನಪಿಸಿಕೊಂಡು, ಘೋರ ವಾಸ್ತವದ ಭವಿಷ್ಯವನ್ನು ಎದುರು ನೋಡುತ್ತಿಲ್ಲ? ರಂಗದ ಚಕ್ರವರ್ತಿಗಳ ಜೀವಿತದ ಕೊನೆಯ ಘಟ್ಟದಲ್ಲಿ ನೋವುಗಳೇ ಏಕೆ ತುಂಬುತ್ತವೆ? ಏಕೆ? ಏಕೆ? ಏಕೆ? ( ಪುಟ ೧೭೫)

ಇಂತಹ ಹಲವು ಚಿಂತನೆಗಳಿಗೆ ನಮ್ಮನ್ನು ಮುಖಾಮುಖಿಯಾಗಿಸುವ ಕಲಾವಿದನ ಆರಾಧನೆಯೇ ಯಕ್ಷೋಪಾಸನೆ.




# ಸೃಷ್ಟಿ

ಕಿವುಡಿ ನರ್ತಕಿಯು ಕುಣಿಯೆ, ಬಾರಿಸುವ
ಕುರುಡು ಹಾಡುಗಾರ
ಅಂಗ-ಭಂಗಿ-ಲಾವಣ್ಯ ಬಣ್ಣಿಸುವ
ಮೂಕ ಚಿತ್ರಗಾರ

ಸಂತೆ ಮಂದಿ ಹಿಮ್ಮೇಳದಲ್ಲಿ ಗೊಂ-
ದಳದ ಕುಣಿತ ನಡೆಯೆ
ಬೀಸು ಗಾಳಿಯಲಿ ಬನವೆ ಒಲೆದ ಒಲು
ಅಂದ ಚೆಂದ ಪಡೆಯೆ

**-ದ.ರಾ.ಬೇಂದ್ರೆ (ಅರಳು-ಮರುಳು ಕವನ ಸಂಕಲನ)**

**ಸಂ**ಚಿಕೆ ವಿಷಯ, ಶೈಲಿ, ಮುಖಪುಟ ಮತ್ತು ಮುದ್ರಣದೊಂದಿಗೆ ಹಿತವಾಗಿ, ಚೆಲುವಾಗಿ ಬಂದಿದೆ. ಹಿರಿಯ ಸಾಧಕರ ನೆನಪಾಗಿ ರುಕ್ಮಿಣೀದೇವಿ ಅರುಂಡೇಲ್ ಅವರ ಬಗ್ಗೆ ಬರೆಯುತ್ತಿರುವುದು ತುಂಬಾ ಒಳ್ಳೆಯ ವಿಷಯ. ಜೊತೆಗೆ ತೆರೆಮರೆಯ, ತೆರೆಯದಿರುವ, ತೆರೆಯೆದುರಿನ ಯಾವ ಸಾಧಕರೇ ಆಗಿರಲಿ, ಅವರ ಬಗ್ಗೆ ಸೂಕ್ಷ್ಮ, ಆಪ್ತ, ಅಪರೂಪದ ಮಾಹಿತಿ ಹೀಗೆಯೇ ನೀಡುತ್ತಿರಿ.




'ಈಗಿನ ಯುವಜನಾಂಗ ಪಾಶ್ಚಾತ್ಯ ಸಂಸ್ಕೃತಿಯ ಕಡೆಗೆ ವಾಲುತ್ತಿದೆ' ಎಂಬ ಆರೋಪಗಳ ಹಿನ್ನಲೆಯಲ್ಲೇ ಈ ಭಾರತೀಯ ಸಂಸ್ಕೃತಿಯೆಡೆಗಿನ ಅರಿವನ್ನು ಬೆಳೆಸುವಲ್ಲಿ, ತಮ್ಮ ಮತ್ತು ಬಳಗದ ಗಂಭೀರ ಮತ್ತು ವಿಚಾರಯುತವಾದ ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯ.

ಅಕ್ಕ ಸ್ಮರಣಸಂಚಿಕೆಯಲ್ಲಿನ ಲೇಖನಕ್ಕೆ ಸಂಪಾದಕರಿಗೆ ದೊರೆತ ಪ್ರಶಸ್ತಿ ಸಂತಸ ತಂದಿದೆ. ಆತ್ಮೀಯ ಅಭಿನಂದನೆ. ಇಂತಹ ಸಾಧನೆಗಳು ಮತ್ತಷ್ಟು ನಿಮ್ಮಿಂದ ಹೊರಬರಲಿ.

**-ಸಂಜಯ ಭಟ್ ಬೆಣ್ಣೆ, ಶಿರಸಿ,**
**-ಕಾವ್ಯ ರಾಣಿ, ಬೆಂಗಳೂರು.**
**- ಕಿರಣ್ ಭಟ್, ಬೆಂಗಳೂರು.**





**ನ**ರ್ತನದ ಹರಹು ತುಂಬಾ ವಿಶಾಲ. ಅದು ಶಾಸ್ತ್ರೀಯ, ಜನಪದ, ಫ್ಯೂಷನ್..ಹೀಗೆ ಜನಜೀವನವನ್ನು ಎಲ್ಲಾ ಬಗೆಯಲ್ಲೂ ಆವರಿಸಿದೆ, ಹಾಸುಹೊಕ್ಕಾಗಿ ಬೆಳೆದಿದೆ, ಜೀವನೋಪಾಯದ, ಜೀವೋತ್ಸಾಹದ, ಜೀವನ ವೈವಿಧ್ಯದ ಅಂಗವಾಗಿದೆ. ಹಾಗಾಗಿ ಈ ಸಂಚಿಕೆಯ ಲಲಿತ ಲಹರಿಯಲ್ಲಿ **ಸುಮಿತ್ರಾನಂದನ ಪಂತ** ಅವರ 'ಚಿದಂಬರಾ ಸಂಚಯನ' ಎಂಬ ಕವನ ಸಂಕಲನದಿಂದ ಆರಿಸಲಾದ **'ಅಗಸರ ನೃತ್ಯ'** ವೆಂಬ ಕವನ...

ಅಕ್ಕೊ ಝಣ ಝಣ ಝಣ
ಝಣ ಝಣನ ಝಣ ಝಣ
ಝಣನೆ ಕುಣಿದು ಗೆಲ್ಲುವಳು
ಗೊಲ್ಲತಿ ಮನವ ಚಣ ಚಣ
ಗಲುಕು ಗೆಜ್ಜೆನಾದ ಅವಳ ಕಾಲಲಿ
ಡೊಂಬನ ಟೊಂಕದಲಿ ಘಂಟೆಗಳ ಉಲಿ
ಬುಗುರಿಯಂತೆ ತಿರುಗುವಳು ಚಳಕದಲಿ
ನೂರಾರು ನುಲಿತ ಡೊಂಬನ ಟೊಂಕದಲಿ

ಅಕ್ಕೊ ಝಣ ಝಣ ಝಣ
ಝಣ ಝಣನ ಝಣ ಝಣ
ಝಣನೆ ಕುಣಿದು ಗೆಲ್ಲುವಳು
ಗೊಲ್ಲತಿ ಮನವ ಚಣ ಚಣ
ಉಲಿಯುತಿದೆ ಡೋಲು ದಾಥಿನ ದಾಥಿನ ದಾಥಿನ
ಹಲುಬಿ ಸಿಡುಕುತಿದೆ ಡಮ ಡಮ ಡಮ
ತಾಳ ನುಡಿಯುತಿದೆ ಟಿಂಮಾ ಟಿಂಮಾ
ಸೊಕ್ಕೇರಿದಗಸ ಇದುವೆ ಹಬ್ಬ ಕಾಮನ !

ಅಕ್ಕೊ ಝಣ ಝಣ ಝಣ
ಝಣ ಝಣನ ಝಣ ಝಣ
ಝಣನೆ ಕುಣಿದು ಗೆಲ್ಲುವಳು ಗೊಲ್ಲತಿ ಮನವ ಚಣ ಚಣ !
ಎದೆಯ ಅತೃಪ್ತ ಬಯಕೆ ಕೆರಳಿ
ಈ ಡೋಲು ತಾಳದ ದನಿಯಲಿ ಹೊರಳಿ
ಕುಣಿವುತಿದೆ ಕೆದರಿ ರೆಕ್ಕೆಯ ಮರಳಿ ಮರಳಿ

ಪ್ರಿಯ ಜನಗಣಕೆ ಉತ್ಸವವಿದರಲಿ
ಅಕ್ಕೊ ಝಣ ಝಣ ಝಣ
ಝಣ ಝಣನ ಝಣ ಝಣ
ಝಣನೆ ಕುಣಿದು ಗೆಲ್ಲುವಳು ಗೊಲ್ಲತಿ ಮನವ ಚಣ ಚಣ

# ದರ್ಪಣ

## ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ

**ಈ ವರೆಗೆ....**

(ತಮಿಳುನಾಡಿನ ಮಧುರೈಲಿ ೧೯೦೪ ಫೆಬ್ರವರಿ ೨೯ ರ ಮಧ್ಯಾಹ್ನದಲ್ಲಿ ಜನಿಸಿದ್ದರು ರುಕ್ಮಿಣಿ. ನೀಲಕಂಠ ಶಾಸ್ತ್ರಿ, ಶೇಷಮ್ಮಾಳ್ ದಂಪತಿಗಳ ೮ ಮಕ್ಕಳ ಪೈಕಿ ರುಕ್ಮಿಣೀಗೆ ಕಲೆಗಳಲ್ಲಿ ಆಸಕ್ತಿ ಹೆಚ್ಚು. ಆದರೆ ಸ್ತ್ರೀಯರಿಗೆ ಆಗಿನ ಸಮಾಜ ಕಲಾಸ್ವಾದನೆಗೆ ಅವಕಾಶವೇ ಕೊಡುತ್ತಿರಲಿಲ್ಲ. ಆದರೆ ರುಕ್ಮಿಣೀಯ ತಂದೆ, ಎಂಜಿನಿಯರ್, ಸಂಸ್ಕೃತ ವಿದ್ವಾನ್ ನೀಲಕಂಠ ಶಾಸ್ತ್ರಿ ರಿಟೈರ್ಡ್ ಆದ ನಂತರ ತಮ್ಮ ವಾಸ್ತವ್ಯವನ್ನು ಅಡ್ಯಾರ್‌ನಿಂದ ಥಿಯೋಸೋಫಿಕಲ್ ಸೊಸೈಟಿಯ ಪಕ್ಕಕ್ಕೆ ಬದಲಾಯಿಸಿಕೊಂಡಿದ್ದರಿಂದಾಗಿ ಥಿಯೋಸೋಫಿಕಲ್ ಸೊಸೈಟಿಯ ಪ್ರಭಾವ ಕುಟುಂಬದ ಮೇಲೆ ಗಾಢವಾಗಿ ಬೀರಿತು. ಮಾತ್ರವಲ್ಲ, ಥಿಯೋಸೋಫಿಕಲ್ ಸೊಸೈಟಿಯಲ್ಲಿ ಕಲಾಸ್ವಾದನೆಗೆ ಹೆಚ್ಚಿನ



**ಪತಿ ಜಾರ್ಜ್ ಅರುಂಡೇಲ್ ಅವರೊಂದಿಗೆ ಫಿನ್‌ಲ್ಯಾಂಡ್‌ನಲ್ಲಿ ರುಕ್ಮಿಣಿ - ೧೯೩೬ ಇಸವಿ**

ಅವಕಾಶ ಸಿಗುತ್ತಿತ್ತು. ಜೊತೆಗೆ, ರವೀಂದ್ರನಾಥ ಠಾಗೋರ್ ಅವರ ‘ಮಾಲಿನಿ’ಯಲ್ಲೂ ಪಾತ್ರ ವಹಿಸಿದ್ದರು. ಮಗಳ ಪ್ರತಿಭೆ ಗುರುತಿಸಿದ ತಂದೆ ಸಂಗೀತ ಕಲಿಯಲೂ ಅವಕಾಶ ಮಾಡಿಕೊಟ್ಟರು.

ಅಂತಹ ಒಂದು ಸಂದರ್ಭದಲ್ಲೇ ಹಿರಿಯ, ಕ್ರೈಸ್ತ ವಿದೇಶಿ ಶಿಕ್ಷಣ ತಜ್ಞ ಡಾ। ಅರುಂಡೆಲ್ ಅವರನ್ನು ಭೇಟಿಯಾದದ್ದು. ತಾಯಿಯ ಮರಣದ ನಂತರ ಅತ್ತೆ ಫ್ರಾನ್ಸಿಸ್ಕಾ ಅವರ ಮಾರ್ಗದರ್ಶನದಲ್ಲಿ ಬೆಳೆದ ಅರುಂಡೇಲ್ ಅವರನ್ನು ಶೈಕ್ಷಣಿಕ ಕಾರ್ಯಕ್ರಮಗಳ ಆಯೋಜನೆ, ನಿರ್ವಹಣೆಗಾಗಿ ಅನ್ನಿ ಬೆಸೆಂಟ್ ಭಾರತಕ್ಕೆ ಕರೆಸಿಕೊಂಡಿದ್ದರು. ಒಂದು ಟೀ ಪಾರ್ಟಿಯಲ್ಲಿ ಅವರ ಜೊತೆ ಭಾಗವಹಿಸಿದ ರುಕ್ಮಿಣೀ, ಮುಂದೆ ಅವರನ್ನೇ ಕೈಹಿಡಿದಾಗ, ಸಾಂಪ್ರದಾಯಿಕ ಮನೆತನವುಳ್ಳ ಸಮಾಜ ವ್ಯಾಪಕವಾಗಿ ಪ್ರತಿಭಟಿಸಿತ್ತು, ಶಾಪ ಹಾಕಿತ್ತು.

ಆದರೆ ರುಕ್ಮಿಣಿಗೆ ಅದೇ ವರವಾಗಿ ಪರಿಣಮಿಸಿತ್ತು. ಸಮಾಜದ ಟೀಕೆಗಳನ್ನು ದೂರವಿರಿಸಲು ಪ್ರವಾಸಕ್ಕೆ ನಿಂತ ದಂಪತಿ ; ಅರಿವಿನ ಹುಡುಕಾಟದಲ್ಲಿ ಥಿಯೋಸೋಫಿಕಲ್ ಸೊಸೈಟಿಯ ವಕ್ತಾರರಾಗಿ ಭಾರತ, ಯುರೋಪಿನಾದ್ಯಂತ ಸಂಚರಿಸಲು ಆರಂಭಿಸಿದರು. ಆದಾಗಲೇ ೧೯೨೩ ರಲ್ಲಿ ಅಖಿಲ ಭಾರತ ಯುವ ಥಿಯೋಸೋಫಿಸ್ಟ್ ಸಂಘದ ಅಧ್ಯಕ್ಷೆ ಮತ್ತು ೧೯೨೫ರಲ್ಲಿ ವಿಶ್ವ ಯುವ ಥಿಯೋಸೋಫಿಸ್ಟ್ ಫೆಡರೇಶನ್‌ನ ಅಧ್ಯಕ್ಷೆಯ ಪಟ್ಟ ರುಕ್ಮಿಣಿಯವರನ್ನು ಅರಸಿ ಬಂದಿತ್ತು. ಇದೇ ಸಂದರ್ಭದಲ್ಲಿ ಅವರಿಗೆ ಮಾರಿಯಾ ಮೊಂಟೆಸ್ಸರಿ, ಜೇಮ್ಸ್ ಕಸಿನ್ಸ್ ಅವರ ಸ್ನೇಹ ದೊರಕಿತು.)



**೧೯೨೮ರ ಇಸವಿ..., ಆಗ ರುಕ್ಮಿಣಿದೇವಿಗೆ ೨೪ ರ ಹರೆಯ...**

ಅದೊಮ್ಮೆ ಹೆಸರಾಂತ ರಷ್ಯನ್ ಬ್ಯಾಲೆ ಕಲಾವಿದೆ ಅನ್ನಾ ಪಾವಲೋವಾ ಮುಂಬೈಗೆ ಬಂದರು. ಆಗ ಯಾವುದೋ ಥಿಯೋಸೋಫಿಕಲ್ ಸೊಸೈಟಿಯ ಕಾರ್ಯಕ್ರಮವೊಂದಕ್ಕೆ ವಾರಣಾಸಿಗೆ ತೆರಳಿದ ಅರುಂಡೇಲ್ ದಂಪತಿ ವಿಷಯ ತಿಳಿದದ್ದೇ ತಡ ಲಗುಬಗೆಯಿಂದ ಓಡೋಡಿ ಬಂದರು. ಪ್ರದರ್ಶನದ ನಂತರ ಪಾವಲೋವಾ ಅವರ ಪ್ರಯಾಣ ಇದ್ದದ್ದು ಆಸ್ಟ್ರೇಲಿಯಾಕ್ಕೆ !

ಅರೇ ! ಅವರು ಹಿಂದಿರುಗುತ್ತಿದ್ದ ಹಡಗಿನಲ್ಲೇ ಪಯಣಿಸುವ ಅಪೂರ್ವ ಅವಕಾಶ ಒದಗಿತ್ತು ಅರುಂಡೇಲ್ ದಂಪತಿಗಳಿಗೆ...! ಪರಿಚಯದ ಮಾತುಗಳು ಸ್ನೇಹಕ್ಕೆ ಹಾದಿ ಹಾಕಿಕೊಟ್ಟವು.

ಬ್ಯಾಲೆ ಕಲಿಯುವ ಹಂಬಲ ರುಕ್ಮಿಣೀಗೆ. ಬೇಡಿಕೆ ಮುಂದಿಟ್ಟಿದ್ದೇ ತಡ, ಪಾವಲೋವಾ ಪ್ರೀತಿಯಿಂದಲೇ ಒಪ್ಪಿಕೊಂಡರು.

ಸತತ ಅಭ್ಯಾಸ ಪ್ರಾರಂಭವಾಯಿತು. ಅದರೊಂದಿಗೇ ಗ್ರೀಕ್ ನೃತ್ಯಗಳನ್ನೂ ಕಲಿತರು. ಜೊತೆಜೊತೆಗೇ ಖ್ಯಾತ ಕಲಾವಿದೆ ಕ್ಲಿಯೋ ನೋರ್ಡಿ ಅವರಿಂದಲೂ ಬ್ಯಾಲೆಯ ಪಟ್ಟುಗಳ ಪಾಠ ಹೇಳಿಸಿಕೊಂಡಿದ್ದಾಯಿತು.

ಆದರೆ, ಇತ್ತ.., ಅದೇ ಸಂದರ್ಭ..,ಒಂದು ಕಾಲದ ಶ್ರೀಮಂತ ಕಲೆ ಭಾರತೀಯಾ ನೃತ್ಯ ಪದ್ಧತಿ ಹೀನಾಯ ಸ್ಥಿತಿಯಲ್ಲಿತ್ತು !

ಅದೊಂದು ದಿನ.., ಪಾವಲೋವಾ ಅವರಿಗೆ ಏನನ್ನಿಸಿತೋ ಏನೋ, ಪಕ್ಕದಲ್ಲಿ ಕೂರಿಸಿಕೊಂಡು ರುಕ್ಮಿಣೀಗೆ ಹೇಳಿದ ಕಿವಿಮಾತು
ಏನು ಗೊತ್ತೇ !

“ ಯಾಕೆ, ನೀನು ಭಾರತದ ನೃತ್ಯ ಪದ್ಧತಿಗಳತ್ತ ಒಲವು ತೋರಬಾರದು? ವಾಪಾಸು ನನ್ನ ಸಂಸ್ಕೃತಿಗೆ ಹಿಂದಿರುಗಿ ನೃತ್ಯ ಪದ್ಧತಿಗಳನ್ನು ಅಭ್ಯಾಸ ಮಾಡಿ ಅದಕ್ಕೊಂದು ಜೀವ ಕೊಡುವ ಕೆಲಸ ಮಾಡಬಾರದು ?”



ಮೂರುತಿಗೊಂದು ರೂಪ ಕೊಡುವ ಹಂತ ಆರಂಭಿಸಿತ್ತು ಮನಸ್ಸು. ರುಕ್ಮಿಣೀ ಮೊದಲು ಕಲಿತದ್ದು ಬ್ಯಾಲೆ ಆದರೂ, ಕಲೆಯ ಬಗೆಗಿದ್ದ ಸೆಳೆತ ಭಾರತದ ಕಲೆ–ಸಂಸ್ಕೃತಿಗಳೆಡೆಗೆ



ಎಳೆದು ತಂದಿತ್ತು. ಅದಕ್ಕೆ ಕಾರಣ ಪಾವಲೋವಾ ಅವರ ಪ್ರೋತ್ಸಾಹ. ಆದರೆ ಕಲಿಯುವುದೆಲ್ಲಿ? ಹೇಗೆ? ಏಕೆಂದರೆ ಆವರೆಗೆ ಭಾರತದ ನೃತ್ಯಗಳನ್ನು ಅಷ್ಟಾಗಿ ಗಮನಿಸಿದವರಲ್ಲ ರುಕ್ಮಿಣಿ !

ಆದರೆ, ದೂರದೃಷ್ಟಿ ದೊರೆತ ಮೇಲೆ ದೂರ ಎಲ್ಲಿದೆ ?

೧೯೩೩ ರ ದಿನ... ನೃತ್ಯ ಸಂಗೀತ ಅಕಾಡೆಮಿಯ ವಾರ್ಷಿಕೋತ್ಸವ.. ಸ್ವಾತಂತ್ರ್ಯ ಹೋರಾಟಗಾರ, ವಕೀಲ, ಅಕಾಡೆಮಿ ಅಧ್ಯಕ್ಷ ಕೃಷ್ಣ ಅಯ್ಯರ್ ನೃತ್ಯ ಕಾರ್ಯಕ್ರಮವೊಂದನ್ನು ಏರ್ಪಾಡು ಮಾಡಿದ್ದರು. ರುಕ್ಮಿಣಿಗೆ ಆಹ್ವಾನದ ಕರೆ ತಲುಪಿತ್ತು.

ರುಕ್ಮಿಣೀ ಅದೇ ಮೊದಲ ಬಾರಿಗೆ ದಕ್ಷಿಣ ಭಾರತದ ನೃತ್ಯವೊಂದನ್ನು ಬಿಡುಗಣ್ಣಿಂದ ನೋಡಿದ್ದು ! ಆಗ ಅವರ ವಯಸ್ಸು ೨೯ !

ಹೆಸರಾಂತ ಗುರು ಮೀನಾಕ್ಷಿ ಸುಂದರಂ ಪಿಳ್ಳೈ ಅವರ ಶಿಷ್ಯೆಯರಾದ ಪಂದನಲ್ಲೂರು ಅಥವಾ ಕಲ್ಯಾಣಿ ಸಹೋದರಿಯರೆಂದೇ ಖ್ಯಾತರಾದ ಜೀವರತ್ನಂ , ರಾಜೇಶ್ವರಿಯವರ ಸಾದಿರ್ ಶೈಲಿಯ ನೃತ್ಯ ಕಾರ್ಯಕ್ರಮ !

ಅದ್ಯಾವುದು ಸಾದಿರ್ ?

(ಸಶೇಷ)

“ಸಂಗೀತ ನನ್ನ ಮೊದಲ ಅಭಿವ್ಯಕ್ತಿ ಮತ್ತು ಆಸಕ್ತಿ. ಅದರೊಂದಿಗೆ ಬೆಳೆದು ಬಂದದ್ದು ನೃತ್ಯ. ಸಂಗೀತವು ನೃತ್ಯಕ್ಕೆ ಬೇಕಾದ ಎಲ್ಲ ಪೂರಕ ವಾತಾವರಣವನ್ನು ಕಲ್ಪಿಸಿಕೊಡುತ್ತದೆ.”

– ರುಕ್ಮಿಣಿದೇವಿ

